

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 309 Tuesday 20-08-2024 E-mail : maruti.b.hosamani76@gmail.com Page: 4 Price : Rs. 1/-


## ಪಿ.ಎಸ್.ಸಜ್ಜನ ಕಲಾ ಮಹಾವಿದ್ಯಾಲಯದ ಬಿಎ ಅಂತಿಮ ವರ್ಷದ ವಿದ್ಯಾರ್ಥಿಗಳಿಂದ ಗುರು ವಂದನಾ ಸಮಾರಂಭ

**ಬೇವೂರ :** ಜಗತ್ತನ್ನು ಆಳುವಂತಹ ಸಂಕಲ್ಪ ಶಕ್ತಿ ಪ್ರೀತಿಗೆ ಇದೆ. ಮಾನವನಿಗೆ ಅಸಾಧ್ಯವಾದುದು ಯಾವುದು ಇಲ್ಲ ಮನಸಿದ್ದಲ್ಲಿ ಮಾರ್ಗವಿದೆ. ವಿದ್ಯಾರ್ಥಿಗಳ ಜೀವನ ನಂದಾ ದೀಪದ ಹಾಗೆ ಬೆಳಗಲು ಒಳ್ಳೆಯತನವನ್ನು ರೂಢಿಸಿ ಕೊಳ್ಳಬೇಕು ಎಂದು ಬೇವೂರಿನ ಶ್ರೀ ಪರಪ್ಪ ಸಂಗಪ್ಪ ಸಜ್ಜನ ಕಲಾ ಮಹಾವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಎಸ್.ಎಸ್. ಆದಾಪೂರ ಹೇಳಿದರು. ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳು ಕಾಲೇಜಿನ ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಹಮ್ಮಿಕೊಂಡ ಗುರುವಂಧನಾ ಸಮಾರಂಭ ಹಾಗೂ ಅಭಿನಂಧನಾ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು ಇಂದು ಎಲ್ಲಾ ಕಡೆ ಸ್ಪರ್ಧೆಗಳಿದ್ದು, ತಮ್ಮ ಪರಿಶ್ರಮ ದೃಢ ನಿರ್ಧಾರಗಳಿಂದ, ಬಂಧುತ್ವದ ಮೌಲ್ಯಗಳ ಅಳಡವಡಿಕೆಯಿಂದ ಜೀವನದಲ್ಲಿ ಉನ್ನತಿಯನ್ನು ಸಾಧಿಸ ಬೇಕೆಂದು ಅವರು ಹೇಳಿದರು.



ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಹಿರಿಯ ಇತಿಹಾಸ ಉಪನ್ಯಾಸಕ ಶ್ರೀ ಬಿ.ಬಿ. ಬೇವೂರ ಮಹಾ ವಿದ್ಯಾಲಯ, ಇಲ್ಲಿನ ಗುರು ಬಳಗದ ಮೇಲೆ ತಾವೂ ಇಟ್ಟು-ಕೊಂಡ ಪ್ರೀತಿ ಅಭಿಮಾನದ ದ್ಯೋತಕವಾಗಿ ಭಾವನಾತ್ಮಕ ಬಂಧವನ್ನು ತೋರುವ ಗುರುವಂಧನಾ ಸಮಾರಂಭ ನೇರವೇರಿಸಿದ್ದು ಸಂತಸವನ್ನು ತಂದಿದೆ. ತಮ್ಮ ಮೂರು ದಶಕಗಳ ಸೇವಾ ಅವಧಿಯಲ್ಲಿ ಇದೊಂದು ಅವಿಸ್ಮರಣೀಯ ಕ್ಷಣವಾಗಿದ್ದು ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚೆಚ್ಚು ವರ್ಷಗಳ ತನಕ ಕಲಿಸಬೇಕೆಂಬ ಉತ್ಸಾಹ ಚೈತನ್ಯವನ್ನು ವಿದ್ಯಾರ್ಥಿ ಬಳಗದ ಪ್ರೀತಿ ತಂದು ಕೊಟ್ಟಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯರಾದ ಡಾ. ಜಗದೀಶ ಗು. ಭೈರಮಟ್ಟಿ ವಿದ್ಯಾರ್ಥಿಗಳು ತಂದೆ-ತಾಯಿ, ಗುರುಗಳು, ಭೂಮಿ ಋಣವನ್ನು ತೀರಿಸುವುದಕ್ಕೆ ಆಗೋದಿಲ್ಲ. ಒಳ್ಳೆ ಮಕ್ಕಳನ್ನು ಈ ನಾಡಿಗೆ ಆಸ್ತಿಯಾಗಿ ಕೊಡ ಮಾಡಿದರೆ ನಾಡಿನ ಪ್ರಗತಿಗೆ ಕಾರಣ ಎನಿಸುತ್ತದೆ. ಗುರು ಬಳಗವನ್ನು ವೈಭವದ ಮಂಗಲ ವಾದ್ಯ ಮೇಳದೊಟ್ಟಿಗೆ ಗುರು ಶ್ರೇಷ್ಠರೆನಿಸಿದ ಡಾ, ಸರ್ವಪಳ್ಳಿ ರಾಧಾಕೃಷ್ಣನ್ ಅವರ ಭಾವಚಿತ್ರದೊಂದಿಗೆ ಮೆರವಣಿಗೆಯಲ್ಲಿ ಕರೆತಂದು ಅಭಿಮಾನ ಪ್ರೀತಿಯ ದ್ಯೋತಕವಾಗಿ ತಾವೆಲ್ಲ ಸರತಿ ಸಾಲಿನಲ್ಲಿ ನಿಂತು ಗೌರವ ನಮನ ಸಲ್ಲಿಸುತ್ತಾ ಪುಷ್ಪ ವೃಷ್ಟಿಯ ಮೂಲಕ ವೇದಿಕೆಗೆ ಕರೆತಂದು ಭಾವನಾತ್ಮಕ ಸತ್ಕಾರ ಸನ್ಮಾನಗಳನ್ನು ಏರ್ಪಡಿಸಿದ್ದು ಮುಖ ವಿಸ್ಮಿತರನ್ನಾಗಿಸಿದೆ. ತಮ್ಮ ಪ್ರೀತಿಗೆ ಅಭಿಮಾನದ ಸಮಾರಂಭಕ್ಕೆ ಕಲಾ ಮಹಾ ವಿದ್ಯಾಲಯದ ಸರ್ವರೂ ಸಂತಸ ಸಂಭ್ರಮದ ಹಾರೈಕೆಗಳನ್ನು ತಮಗೆ ಸಮರ್ಪಿಸುತ್ತಾರೆ ಎಂದು ಹೇಳಿದರು. ವಿದ್ಯಾರ್ಥಿಗಳು ಭವಿಷ್ಯದ ದಿನಗಳಲ್ಲಿ ಹುಡುಗಾಟವನ್ನು ಕಡಿಮೆ ಮಾಡಿಕೊಂಡು ಜ್ಞಾನ, ಸಂಸ್ಕಾರಗಳ ಹುಡುಕಾಟ ದತ್ತ ಮುಖ ಮಾಡಬೇಕು. ದಾನ ದಾನಗಳಲ್ಲಿ ಶ್ರೇಷ್ಠವಾದ ವಿದ್ಯಾ ದಾನದಿಂದ ವಜ್ರದಂತಹ ಪ್ರಕಾಶ ತಮ್ಮೆಲ್ಲರಿಗೂ ಬರಬೇಕು ಕಾಯಕ ನಿಷ್ಠರಾಗಿ ತಾವೆಲ್ಲರೂ ಬೆಳೆಯ ಬೇಕೆಂದು ಹಾರೈಸಿದರು.

ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರು ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿಗಳು ಆದ ಶ್ರೀ ಜಿ.ಎಸ್. ಗೌಡರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕನ್ನಡ ಉಪನ್ಯಾಸಕ ಡಾ, ಸಂಗಮೇಶ ಹಂಚಿನಾಳ, ಇಂಗ್ಲೀಷ ಉಪನ್ಯಾಸಕ ಡಿ.ವಾಯ್ ಬುಡ್ಡಿಯವರ, ಇತಿಹಾಸ ಉಪನ್ಯಾಸಕ ಡಾ, ಆದಪ್ಪ.ಮ.ಗೊರಚಿಕ್ಕನವರ, ರಾಜ್ಯಶಾಸ್ತ್ರ ಉಪನ್ಯಾಸಕ ನಾಗಲಿಂಗೇಶ ಬೆಣ್ಣೂರ, ಬೋಧಕೇತರ ಸಿಬ್ಬಂದಿಯವರಾದ ಆರ್.ಬಿ.ಕರಡಿಗುಡ್ಡ, ಗ್ಯಾನಪ್ಪ ಶಿರೂರ, ಶಿವು ಕಟಗಿ, ಎಸ್.ಬಿ ಹೂಗಾರ ಮುಂತಾದವರು ಭಾಗಿಯಾಗಿದ್ದರು. ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿ ಪರಶುರಾಮ ಅಂಬಿಗೇರ ಸ್ವಾಗತಿಸಿದರು. ಸುರೇಖಾ ಚಲವಾದಿ ಪುಷ್ಪಾರ್ಪಣೆ ಕಾರ್ಯಕ್ರಮ ನೇರವೇರಿಸಿ ಕೊಟ್ಟರು. ವಿದ್ಯಾರ್ಥಿನಿಯರದಾ ಪ್ರತಿಭಾ ಅಶೋಕ ಹೆಳವರ, ಪ್ರತಿಭಾ ಶೇಖಪ್ಪ ಪೂಜಾರಿ ಕನ್ನಡ ಹಾಗೂ ಇಂಗ್ಲೀಷ ದ್ವಿ ಭಾಷೆಗಳಲ್ಲಿ ನಿರೂಪಿಸಿದರು. ವಿದ್ಯಾರ್ಥಿನಿ ವಸಂತಲಕ್ಷ್ಮಿ ಸಜ್ಜನ ಸನ್ಮಾನ ಸತ್ಕಾರ ಸಮಾರಂಭವನ್ನು ನಡೆಸಿ ಕೊಟ್ಟರು. ಭಾಗ್ಯಾಶ್ರೀ ಇಜಾರದಾರ ವಂದಿಸಿದರು. ಹೃತೀಕ್ ಭಜಂತ್ರಿ ಕಾಲೇಜಿನ ವಿದ್ಯಾರ್ಥಿ ವೃಂದದವರ ಸಹಕಾರಕ್ಕೆ ಕೃತಜ್ಞಾ ಪೂರ್ವಕ ವಂದನೆಗಳನ್ನು ಸಲ್ಲಿಸಿದರು. ಅಶ್ವಿನಿ ಗೌಡರ, ಅಶ್ವಿನಿ ಜಾನಮಟ್ಟಿ, ಸಂಗನಬಸಮ್ಮ ಕರಿಗಾರ ಸಂಗಡಿಗರು ಪ್ರಾರ್ಥಿಸಿದರು. ಸುಜಾತ ಕಡೆಮನಿ, ಸಂಗಮ್ಮ ತೆಗ್ಗಿನಮನಿ, ಭಾಗ್ಯಶ್ರೀ ಗೌಡರ ಸಂಗಡಿಗರು ಗುರು ಸ್ಮರಣೆಯ ಹಾಡನ್ನು ಹಾಡಿದರು. ವಿದ್ಯಾರ್ಥಿಗಳಾದ ಪ್ರವೀಣ ಬ. ಹೀರೆಮಾಗಿ, ಆದರ್ಶ ರಂಗಾಪೂರ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮಗಳನ್ನು ನಡೆಸಿ ಕೊಟ್ಟರು. ವಾದ್ಯ ಮೇಳದ ಮೆರಗು:- ಕಾಲೇಜಿನ ಆವರಣದ ಧ್ವಜ ಕಟ್ಟೆಯಿಂದ ಕಾರ್ಯಕ್ರಮದ ಸಭಾಂಗಣದ ತನಕ ಶಹನಾಯಿ, ಹಲಗೆ ಮಜಲಿನ ವಾದ್ಯಮೇಳ ನಡುವೆ ಡಾ, ರಾಧಾಕೃಷ್ಣನ್ ಅವರ ಭಾವಚಿತ್ರ ಎಡ ಬಲದಲ್ಲಿ ವಿದ್ಯಾರ್ಥಿಗಳು ಗುರು ಬಳಗಕ್ಕೆ ನಮನ ಸಲ್ಲಿಸುತ್ತಾ ಪುಷ್ಪವೃಷ್ಟಿ ಸಮರ್ಪಿಸುತ್ತಾ ಸಾಗಿದ್ದು ಅಕ್ಷರ ಅರಿವು ಜ್ಞಾನ ನೀಡಿದ ಗುರು ವೃಂದದವರು ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾದರು. ಸಂಗಮೇಶ ಭಜಂತ್ರಿ, ಗೋಪಾಲ ಮಾದಾರ, ನಿಂಗಣ್ಣ ವಾಲೀಕಾರ, ಸಂತೋಷ ಮೇಟಿ, ಸಂಗಮೇಶ ಚಲವಾದಿ, ರೇವಣಶಿದ್ದ ಮಾಗಿ, ಬಸವರಾಜ ಚಲವಾದಿ, ಕಿರಣಕುಮಾರ ಎಸ್.ಎ, ಗೋಪಾಲ ಮಾದಾರ, ಸಲ್ಮಾ ನಧಾಪ, ಮಂಗಲಾ ಆಲೂರ, ಭಾಗ್ಯಾ ಯರ್ಾ ಗಿ, ರೇಷ್ಮಾ ಹಳ್ಳೂರ ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳು ಮೆರವಣಿಗೆಯ ನೇತೃತ್ವವನ್ನು ವಹಿಸಿ ಕೊಂಡು ಗುರು ಬಳಗವನ್ನು ವೇದಿಕೆಯತ್ತ ಕರೆತಂದು ಗೌರವದ ನಮನ ಸಲ್ಲಿಸಿದರು. ವಿದ್ಯಾರ್ಥಿಗಳೆ ತಯಾರಿಸಿದ ಪುಷ್ಪಗುಚ್ಚಗಳು:- ಕಾರ್ಯಕ್ರಮದ ನಿಮಿತ್ಯವಾಗಿ ವಿದ್ಯಾರ್ಥಿ ಪಾಂಡುರಂಗ ಸಂದಿಮನಿ ನೇತೃತ್ವದಲ್ಲಿ ಕಿರಣ ಪತ್ತಾರ, ಚನ್ನಬಸು ಹುನಗುಂದ, ಪ್ರಜ್ವಲ ಕುರಿ, ಮಲ್ಲಿಕಾರ್ಜುನ ಕಂಬಾರ ,ರವಿ ಮಾದಾರ ಮುಂತಾದವರು ತಯಾರಿಸಿದ ಪುಷ್ಪ ಗುಚ್ಚಗಳು ಆಕರ್ಷಣಿಯ ಎನಿಸಿ ವಿದ್ಯಾರ್ಥಿಗಳ ಸೃಜನ ಶೀಲತೆಗೆ ಅಭಿನಂಧಿಸಲಾಯಿತು.

**ವರದಿ : ಅಮರೇಶ ಮ. ಗೊರಚಿಕ್ಕನವರ**
**(ಕೂಡಲ ಸಂಗಮ)**

## "ತಣ್ಣೀರು" ಆಲ್ಬಂಸಾಂಗ್ ಬಿಡುಗಡೆ

**ಬೆಂಗಳೂರು :** ಇದೀಗ ಉತ್ತರ ಕರ್ನಾಟಕದ ಯುವ ಪ್ರತಿಭೆ ನಿರ್ದೇಶಿಸಿರುವ ಮತ್ತು ಹೊಸ ಪ್ರತಿಭೆಗಳು ಅಭಿನಯಿಸಿರುವ "ತಣ್ಣೀರು" ಕಣ್ಣೀರಿನ ಹನಿ ಮಿಲನ ಎಂಬ ಟ್ಯಾಗ್ ಲೈನ್ ಹೊಂದಿದ ಆಲ್ಬಂಸಾಂಗ್ ಯೂಟ್ಯೂಬ್ನಲ್ಲಿ ಬಿಡುಗಡೆಯಾಗಿ ಭರ್ಜರಿ ಸದ್ದು ಮಾಡುತ್ತಿದೆ. ಹುಡುಗರು ತಾನು ಪ್ರೀತಿಸಿದ ಹುಡುಗಿಗೆ ಎಷ್ಟೇ ಕಾಳಜಿ ಮಾಡಿ, ಎಷ್ಟೇ ಪ್ರೀತಿ ತೋರಿಸಿದ್ದರು ಕೊನೆಗೆ ಬಿಟ್ಟು ಹೋಗುತಾರೆ. ಯಾವುದೇ ಕಾರಣಕ್ಕೂ ಪ್ರೀತಿ ಸ್ವಾರ್ಥ ಆಗಬಾರದು ಸ್ಫೂರ್ತಿ ಆಗಬೇಕು ಅನ್ನೋದೇ ಈ ಗೀತೆಯ ಸಾರ. ಕನ್ನಡ ಚಿತ್ರರಂಗ ಹಾಗೂ ರಂಗಭೂಮಿಯಲ್ಲಿ ಹಲವಷ್ಟು ನಾಟಕಗಳು ನಿರ್ದೇಶನ ಮಾಡಿ ಕಳೆದ ಎಂಟು ವರ್ಷಗಳಿಂದ ಸಕ್ರಿಯವಾಗಿ ತೊಡಗಿಸಿ ಕೊಂಡು ಹಲವಾರು ಚಿತ್ರಗಳಿಗೆ ಧಾರಾವಾಹಿಗಳಿಗೆ ನಿರ್ದೇಶನ ವಿಭಾಗದಲ್ಲಿ ಕಾರ್ಯ ನಿರ್ವಹಿಸಿರುವ ವಿಜಯಪೂರ ಮೂಲದ ಉತ್ಸಾಹಿ ಯುವಕ ಪವನ್ ಕುಮಾರ್ ಬೂದಿಹಾಳ ನಿರ್ದೇಶನ ಮಾಡಿದ್ದಾರೆ. ಮುಖ್ಯ ಕಲಾವಿದರಾಗಿ ಜೀ ಕನ್ನಡದಲ್ಲಿ ಸರಿಗಮಪ ಡಿಕೆಡಿ ಅಲ್ಲಿ ಸೆಟ್ ಬಾಯ್ ಆಗಿ ಕೆಲಸ ಮಾಡುತ್ತಿರುವ ಶ್ರೀಧರ ಈ ಹಾಡಿಗೆ ನಾಯಕ ನಟನಾಗಿದ್ದಾರೆ. ನಟಿ ನಿಧಿಗೌಡ, ದೀಕ್ಷಿತಾ, ಮಧು, ಪೀರು, ನವೀನ್, ರವಿ ಕರಿಚಿರತೆ, ಅಭಿನಯಿಸಿದ್ದು ಸಹಜ ಅಭಿನಯ ಮೂಲಕ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಯಶಸ್ವಿ ಯಾಗಿದ್ದಾರೆ.



ಬೆಂಗಳೂರ ಸುತ್ತಮುತ್ತ ಚಿತ್ರೀಕರಣ ನಡೆಸಲಾದ ಈ ಹಾಡಿನ ತಾಂತ್ರಿಕ ವರ್ಗದಲ್ಲಿ ಛಾಯಾ ಗ್ರಹಣ ಚಂದ್ರಸೇನ , ಸಂಕಲನ ಜಸ್ವವಂತ, ಫಯಾಜ್ ಕುಷ್ಟಗಿ ಮ್ಯೂಜಿಕ್, ಗುಡ್ಡಪ್ಪ ಮಾಸ್ತರ, ಯಲಿವಾಲ ಉಪ್ಪಾರ, ಯಲ್ಲಪ್ಪ ಮಾಸ್ತರ ಸಾಹಿತ್ಯ ರಚಿಸಿದ್ದಾರೆ. ಜಿ.ಪಿ,ಕೋರಿಯೋಗ್ರಾಫರ್ ನವೀನ ಎಂಜೆ, ಚಂದುಳ್ಳಿ ಚೆಲುವೆ ಖ್ಯಾತಿಯ ಗುಡ್ಡಪ್ ಮಾಸ್ತರ ಹಳಿಯಾಳ ಹಾಡಿದ್ದು , ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಅವರದಿದೆ, ಕಲ್ಪನೆ ಮತ್ತು ನಿರ್ದೇಶನವನ್ನು ಪವನಕುಮಾರ ಬೂದಿಹಾಳ ಮಾಡಿದ್ದಾರೆ. ಕಾವೇರಿ ನಾಗಪ್ಪ ಹನಗುಂದಿ ನಿರ್ಮಿಸಿದ್ದಾರೆ. ನಿಧಿಗೌಡ ಯೂಟ್ಯೂಬ್ ಚಾನೆಲ್ನಲ್ಲಿ ಹಾಡು ಬಿಡುಗಡೆಯಾಗಿದ್ದು. ಎಲ್ಲರೂ ವೀಕ್ಷಿಸಿ ಯುವ ಪ್ರತಿಭೆಗಳನ್ನು ಪ್ರೋತ್ಸಾಯಿಸ ಬೇಕು ಎಂದು ನಿರ್ದೇಶಕ ಪವನಕುಮಾರ ತಿಳಿಸಿದ್ದಾರೆ.

**ವರದಿ : ಡಾ. ಪ್ರಭು ಗಂಜಿಹಾಳ**
**ಮೊ : 9448775346**

## ಸೋಷಿಯಲ್ ಮೀಡಿಯಾ ಪುಡಾರಿಗಳ ವಿರುದ್ಧ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ದೂರು

**ಬಾಗಲಕೋಟೆ :** ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣವಾದ ಇನ್ಸ್ಟಾಗ್ರಾಮ್ ನಲ್ಲಿ ಕೆಲವು ಯುವಕರು ಅಸಭ್ಯ, ಅವಾಚ್ಯ ಪದಗಳಿಂದ ಡೈಲಾಗ್ ಹೇಳುವ ಮೂಲಕ ಪರಸ್ಪರ ನಿಂದನೆಯ ಜೊತೆಗೆ ಮಾತೃ ನಿಂದನೆ, ಪಿತೃ ನಿಂದನೆ, ಭ್ರಾತೃ ನಿಂದನೆಗಳಿಂದ ದ್ವೇಷ ವೈಷಮ್ಯಗಳನ್ನು ಹರಡುತ್ತಿದ್ದರು. ಇದು ಸಭ್ಯಸ್ಥರಿಗೆ ಮುಜುಗರದ ಜೊತೆಗೆ ಕಿರಿಕಿರಿಯನ್ನುಂಟು ಮಾಡುತ್ತಿತ್ತು.



ಸಾಮಾಜಿಕ ಜಾಲತಾಣವು ಇಷ್ಟೆಲ್ಲಾ ದುರುಪಯೋಗ ಆಗುತ್ತಿದ್ದರು, ಯುವಕರು ಮಾಡುವ ಅಮಾನವೀಯ ರೀಲ್ಸ್ ಗಳು ಮಕ್ಕಳ, ಯುವಕರ ಮೇಲೆ ನಕರಾತ್ಮಕ ಪ್ರಭಾವ ಬೀರಿ, ಕಲಹಕ್ಕೆ ಪ್ರಚೋದನೆ ನೀಡುವಂತೆ ಮಾಡುತ್ತಿದ್ದರು. ಇನ್ಸ್ಟಾಗ್ರಾಮ್ ಪುಡಾರಿಗಳ ಡೈಲಾಗ್ ಗಳು ಬಾಂಧವ್ಯಗಳನ್ನು ತುಚ್ಚವಾಗಿ ತೋರಿಸುತ್ತಿದ್ದವು. ಇದರಿಂದ ಜನರು ರೋಸಿ ಹೋಗಿದ್ದರು. ಈಗ ಯುವ ಪತ್ರಕರ್ತರಾದ ಕು. ಹನಮಂತ ಐಹೊಳೆಯವರು ಬಾಗಲಕೋಟೆ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಸಾಮಾಜಿಕ ಜಾಲತಾಣ ದುರುಪಯೋಗ ಪಡಿಸಿಕೊಳ್ಳುತ್ತಿರುವ ಪುಂಡರ ವಿರುದ್ಧ ದೂರು ನೀಡಿ-ದ್ದು. ಅದರಲ್ಲಿ ಇನ್ಸ್ಟಾಗ್ರಾಮ್ ಪ್ರೋಫೈಲ್ ಹೆಸರುಗಳನ್ನು ದಾಖಲಿಸಿದ್ದಾರೆ. ಇದೀಗ ಜಿಲ್ಲೆ ಜಿಲ್ಲೆಗಳ ನಡುವೆ ವೈಷಮ್ಯ ಸೃಷ್ಟಿಯಾಗುವ ಮೊದಲೇ ಕ-ರೆದು ವಿಚಾರಿಸಿ, ಎಚ್ಚರಿ-ಕೆ ನೀಡುವಂತೆ ತಿಳಿಸಿದ್ದಾರೆ. ಇನ್ನಾದರೂ ಸಾಮಾಜಿಕ ಜಾಲತಾಣಗಳಲ್ಲಿ ಯುವಕರ ಪುಂಡಾಟಕ್ಕೆ ಬ್ರೇಕ್ ಬೀಳುತ್ತಾ? ಕಾದು ನೋಡಬೇಕಿದೆ.

## ಕೊಲ್ಕತ್ತಾ ವೈದ್ಯೆ ಅತ್ಯಾಚಾರ-ಹತ್ಯೆ ಖಂಡಿಸಿ ಪ್ರತಿಭಟನೆ

**ತಾಳಿಕೋಟಿ :** ಪಶ್ಚಿಮ ಬಂಗಾಳದ ಕೊಲ್ಕತ್ತಾದ ಆರ್.ಜಿ.ಕರ್ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಕರ್ತವ್ಯ ನಿರತ ಯುವ ವೈದ್ಯ ಮೇಲೆ ನಡೆದ ಅತ್ಯಾಚಾರ ಮತ್ತು ಅಮಾನುಷ ಹತ್ಯೆಯನ್ನು ಖಂಡಿಸಿ ಪಟ್ಟಣದ ವೈದ್ಯರ ಸಂಘ. ಭಾರತೀಯ ವೈದ್ಯರ ಸಂಘ ತಾಳಿಕೋಟಿ. ಆಯುಷ್ ಫೆಡರೇಷನ್ ಹಾಗೂ ಕೆಜಿಎಂಓ-ಎದ ಪದಾಧಿಕಾರಿಗಳು ಐಎಂಎ ಕ-ರೆದ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿ ಶನಿವಾರ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು. ಪಟ್ಟಣದ ಶಿವಾಜಿ ಸರ್ಕಲ್ ದಿಂದ ಪ್ರತಿಭಟನಾ ಮೆರವಣಿಗೆ ನಡೆಸಿದ ವೈದ್ಯರು ಮಹಾರಾಣಾ ಪ್ರತಾಪ್ ಸಿಂಹ ಸರ್ಕಲ್ ಬಸ್ ನಿಲ್ದಾಣದ ಮಾರ್ಗವಾಗಿ ಸಂಚರಿಸಿ ತಹಶೀಲ್ದಾರ್ ಕಾರ್ಯಾಲಯಕ್ಕೆ ತೆರಳಿ ತಹಶೀಲ್ದಾರ್ ಕೀರ್ತಿ ಚಾಲಕ್ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.





ಈ ಸಂದರ್ಭದಲ್ಲಿ ತಾಳಿಕೋಟಿ ವೈದ್ಯಕೀಯ ಸಂಘದ ಅಧ್ಯಕ್ಷ ಡಾ.ಆರ್.ಪಿ.ಅಗರವಾಲ ಮಾತನಾಡಿ ಧರ್ಮಶಾಸ್ತ್ರಗಳು ವೈದ್ಯರನ್ನು ನಾರಾಯಣೋ ಹರಿ ಎಂದು ಹೇಳುತ್ತವೆ. ಆದರೆ ದೇವರ ಸಮಾನರಾದ ವೈದ್ಯರಿಗೆ ಇಲ್ಲಿ ಮನುಷ್ಯರೆಂದು ಭಾವಿಸುತ್ತಿಲ್ಲ. ಅಷ್ಟು ಕೆಟ್ಟದಾಗಿ ಅವರೊಂದಿಗೆ ವರ್ತಿಸಲಾಗುತ್ತಿದೆ ಕಳೆದ ಕೆಲವು ತಿಂಗಳುಗಳ ಹಿಂದೆ ಪಟ್ಟಣದಲ್ಲಿ ವೈದ್ಯರ ಮೇಲೆ ಹಲ್ಲೆಯ ಘಟನೆ ನಡೆಯಿತು ಆಗಲು ನಾವು ಇದೇ ರೀತಿಯಾಗಿ ಪ್ರತಿಭಟನೆ ಮಾಡಿ ಮನವಿ ನೀಡಿದೆವು ಆದರೆ ಯಾವುದೇ ಕ್ರಮ ಜರುಗಲಿಲ್ಲ ಇದೀಗ ಇಡೀ ನಾಗರಿಕ ಸಮಾಜವೇ ತಲೆತಗ್ಗಿಸುವಂತಹ ಅಮಾನುಷವಾದ ಘಟನೆ ನಡೆದಿದೆ. ಕರ್ತವ್ಯ ನಿರಿತ ಕೊಲ್ಕತ್ತಾದ ಯುವ ವೈದ್ಯೆಳ ಅತ್ಯಾಚಾರ ನಡೆಸಿ ಅವಳನ್ನು ಕ್ರೂರವಾಗಿ ಹತ್ಯೆ ಮಾಡಲಾಗಿದೆ ಜನರ ಸೇವೆಯಲ್ಲಿ ತೊಡಗಿದಂತಹ ವೈದ್ಯರ ಮೇಲೆ ಈ ರೀತಿಯಾದಂತಹ ದೌರ್ಜನ್ಯಗಳಿಂದ ಭಯದ ವಾತಾವರಣ ನಿರ್ಮಾಣವಾಗಿ ಸೇವೆ ಮಾಡುವುದನ್ನೇ ನಿಲ್ಲಿಸಿ ಬಿಡುವ ಸ್ಥಿತಿ ನಿರ್ಮಾಣವಾಗಿದೆ. ಅವರ ಪ್ರಾಣ ಹಾಗೂ ಗೌರವಕ್ಕೆ ಯಾವುದೇ ರೀತಿಯಾದಂತಹ ಸುರಕ್ಷತೆ ಇವತ್ತು ಇಲ್ಲ ಇದು ನಮ್ಮ ಕಾನೂನು ಸುವ್ಯವಸ್ಥೆಯ ದುರ್ಬಲತೆಯನ್ನು ತೋರಿಸುತ್ತದೆ. ನಮ್ಮ ಜನಪ್ರತಿನಿಧಿ ಹಾಗೂ ಸರ್ಕಾರಗಳು ಇದರ ಕುರಿತು ಗಂಭೀರವಾಗಿ ಯೋಚಿಸಬೇಕಾಗಿದೆ. ಇಂಥಹ ಘಟನೆಗಳಿಂದ ವೈದ್ಯರ ಮನೋಬಲ ಕುಗುತ್ತದೆ.ವೈದ್ಯರು ನಿರ್ಭೀತಿಯಿಂದ ಸಾರ್ವಜನಿಕರ ಸೇವೆಯನ್ನು ನೀಡುವ ಅವಕಾಶ ಕಲ್ಪಿಸಬೇಕಾಗಿದೆ.ಯುವ ವೈದ್ಯಳ ಅತ್ಯಾಚಾರ ಹಾಗೂ ಕೊಲೆಯನ್ನು ಖಂಡಿಸಿ ಇಂದು ಭಾರತೀಯ ಸಂಘವು ತುರ್ತು ಸೇವೆ ಹೊರತುಪಡಿಸಿ ಇತ-ರೆ ಎಲ್ಲಾ ಆರೋಗ್ಯ ಸೇವೆಗಳನ್ನು ಸ್ಥಗಿತಗೊಳಿಸುವಂತೆ ಇಂದು ಪ್ರತಿಭಟನೆಗೆ ಕರೆ ನೀಡಿದೆ ಇದಕ್ಕೆ ಬೆಂಬಲ ಸೂಚಿಸಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದ್ದೇವೆ. ಇಂಥಹ ಘಟನೆಗಳು ಮತ್ತೆ ಮರುಕಳಿಸಿದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಒತ್ತಾಯಿಸುತ್ತೇವೆ ಎಂದರು. ಪ್ರತಿಭಟನೆಯಲ್ಲಿ ಡಾ.ವಿ.ಎಸ್. ಕಾರ್ಚಿ. ಡಾ.ಎನ್. ಎಲ್. ಶೆಟ್ಟಿ.ಡಾ.ಐ.ಬಿ.ತಳ್ಳೊಳ್ಳಿ. ಡಾ. ಸರೋಜಿನಿತೊನಶ್ಯಾಳ.ಡಾ.ಶ್ರೀಮತಿ ಕೆ.ಎಸ್.ಸಜ್ಜನ.ಡಾ.ಗಂಗಾಂಬಿಕಾ ಪಾಟೀಲ.ಡಾ. ಶ್ರೀಮತಿ ಹಜೇರಿ. ಶ್ರೀಮತಿ ಡಾ.ಪಿ.ಎ.ಭಟ್. ಡಾ.ಆರ್.ಎಂ.ಕೊಳ್ಯಾಳ. ಡಾ. ವಿಜಯಕುಮಾರ ಅಮಲ್ಯಾಳ. ಡಾ.ಎ.ಎ.ನಾಲಬಂದ.ಡಾ.ಪ್ರಭುಗೌಡ ಅಸ್ಕಿ.ಡಾ.ಜಿ.ಎ.ಚಿತ್ತರಗಿ.ಡಾ.ನಜೀರ ಕೊಳ್ಯಾಳ.ಡಾ.ಸಂತೋಷ ಕೊಂಗಂಡಿ. ಡಾ.ಎಂ.ಎಸ್.ಪಾಟೀಲ.ಡಾ.ಡೋಣಿ. ಡಾ.ನಾಗೂರ.ಡಾ.ಇಲಿಯ್ಯಾಸ ಬೇಪಾರಿ. ಡಾ.ಸುರೇಶ ಹಂಚಾಟೆ. ಪ್ಯಾರಾ ಮೆಡಿಕಲ್ಸ್. ಲ್ಯಾಬ್ ಟೆಕ್ನಿಷಿಯನ್ಸ್ ಹಾಗೂ ನರ್ಸ್ ಗಳುಇದ್ದರು.

## ಪಟ್ಟಣ ಪಂಚಾಯಿತಿಗೆ ಅಧ್ಯಕ್ಷರಾಗಿ ಕಾವಲಿ ಶಿವಪ್ಪ ನಾಯಕ, ಉಪಾಧ್ಯಕ್ಷರಾಗಿ ಶ್ರೀಮತಿ ಲೀಲಾವತಿ ಪ್ರಭಾಕರ್ ಆಯ್ಕೆ



**ಕೂಡ್ಲಿಗಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣ ಪಂಚಾಯತಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಚುನಾವಣೆ ನಡೆದಿದ್ದು ಸೋಮವಾರ ರಂದು ಮಾನ್ಯ ತಾಲೂಕು ದಂಡಧಿಕಾರಿಗಳು ಹಾಗೂ ಚುನಾವಣೆ ಅಧಿಕಾರಿಗಳ ಸಮ್ಮುಖದಲ್ಲಿ ನಡೆಯಿತು. ಈ ಹಿಂದೆ ಮೊದಲನೇ ಅವಧಿಯಲ್ಲಿ ಪಟ್ಟಣ ಪಂಚಾಯತಿಯನ್ನು ಬಿ.ಜೆ.ಪಿ ಪಕ್ಷದ ಸದಸ್ಯರಾದ ಶ್ರೀ ಮತಿ ಶಾರದಾ ಬಾಯಿ ಯವರು ಎರಡು ವರ್ಷ ಐದು ತಿಂಗಳು ಅಧಿಕಾರ ನಡೆಸಿದ್ದು ನಂತರ ಎರಡನೇ ಅವಧಿಯ ಸಂದರ್ಭದಲ್ಲಿ ಕಾನೂನಾತ್ಮಕವಾಗಿ ಕೋರ್ಟ್ ಮೊರೆಗೆ ಒ.ಬಿ.ಸಿ ಮೀಸಲಾತಿಯ ಬಗ್ಗೆ ಟಿ.ಪಿ. ಹಾಗೂ ಝೆಡ್.ಪಿ ಯ ಸಲುವಾಗಿ ಕೋರ್ಟ್ಗೆ ತೆರಳಿದ್ದು. ನಂತರ ಕೋರ್ಟ್ ತೀರ್ಪು ಆಗಸ್ಟ್ ತಿಂಗಳಲ್ಲಿ ತೆರೆ ಹೇಳಿದಿದ್ದು ಆಗಸ್ಟ್ 19 ರಂದು ಪಟ್ಟಣ ಪಂಚಾಯತಿ ಚುನಾವಣೆ ನಡೆದಿದ್ದು. ಈ ಸಂದರ್ಭದಲ್ಲಿ ಕೂಡ್ಲಿಗಿ ಪಟ್ಟಣ ಪಂಚಾಯತಿಯಲ್ಲಿ ಸಾಮಾನ್ಯ ಸ್ಥಾನ ಇದ್ದು. ಈ ಅಧ್ಯಕ್ಷರ ಸ್ಥಾನಕ್ಕೆ ಕೋರ್ಟ್ ತೀರ್ಪು ಪ್ರಕಾರ ಎರಡನೇ ಅವಧಿಯ ಚುನಾವಣೆ ನಡೆದ ಸಂದರ್ಭದಲ್ಲಿ ಪಟ್ಟಣ ಪಂಚಾಯತಿಗೆ ಸೋಮವಾರ ರಂದು ಅವಿರೋಧ ಅಧ್ಯಕ್ಷರಾಗಿ ಪರಿಶಿಷ್ಟ ಪಂಗಡದ ಕಾವಲಿ ಶಿವಪ್ಪ ನಾಯಕ ರವರನ್ನು (ಕಾಂಗ್ರೇಸ್) ತೆಕ್ಕೆಗೆ ಒಲಿದು ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಸಾಮಾನ್ಯ ಮಹಿಳೆ ಸ್ಥಾನ ಇದ್ದು ಈ ಸ್ಥಾನಕ್ಕೆ ಕಾಂಗ್ರಸ್ಸಿನ ಇಬ್ಬರು ಸದಸ್ಯರುಗಳಾದ ಶ್ರೀಮತಿ ಲೀಲಾವತಿ ಪ್ರಭಾಕರ್ ಹಾಗೂ ದಾಣಿ ಚೌಡಮ್ಮ ರವರುಗಳು ನಾಮ ಪತ್ರವನ್ನು ಸಲ್ಲಿಸಿ ಪೈಪೋಟಿಯಲ್ಲಿದ್ದು ತೆರೆವಾದ ಉಪಾಧ್ಯಕ್ಷ ಸ್ಥಾನವನ್ನು ಕಾಂಗ್ರೆಸ್ ಪಕ್ಷದ ಮುಖಂಡರುಗಳು ದಾಣಿ ಚೌಡಮ್ಮ ರವರನ್ನು ತಮ್ಮ ನಾಮ ಪತ್ರ ಹಿಂತೆಗೆದು ಕೊಳ್ಳುವಂತೆ ಮನವೊಲಿಸಿ ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀಮತಿ ಲೀಲಾವತಿ ಪ್ರಭಾಕರ್ ರವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಹಾಗೂ ಮಾನ್ಯ ಶಾಸಕರು ಅಧ್ಯಕ್ಷ ಉಪಾಧ್ಯಕ್ಷ ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಎಸ್ಸಿ/ ಎಸ್ಟಿ ಹಾಗೂ ಒ.ಬಿ.ಸಿ ಒಳಗೊಂಡು ಅಧಿಕಾರದ ಸ್ಥಾನ ಮಾನಗಳನ್ನು ಸಂವಿಧಾನಾತ್ಮಕವಾಗಿ ಸಮಾನತೆಯ ದೃಷ್ಟಿಯನ್ನು ಇಟ್ಟು ಕೊಂಡು ತೆರವಾದ ಸ್ಥಾನಗಳನ್ನು ತುಂಬಲು ಪ್ರಮುಖವಾಗಿ ಶಾಸಕರು ಜವಾಬ್ದಾರಿಯನ್ನು ವಹಿಸಿ ಕೊಂಡು ಎಲ್ಲಾ ಸಮುದಾಯದ ಜನರಿಗೆ ಅಧಿಕಾರ ಸಿಗುವಂತೆ ಮಾಡಿ ಎಲ್ಲಾ ಜನ ಸಾಮಾನ್ಯರು ಎನ್.ಟಿ.ಶ್ರೀನಿವಾಸ್ ರವನ್ನು ಸದಸ್ಯರುಗಳು ಮೆಚ್ಚುಗೆ ವ್ಯಕ್ತಪಡಿಸಿದರು. ಹಾಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನ ಮಾನಗಳನ್ನು ಮಾನ್ಯ ತಾಲೂಕು ದಂಡಾಧಿಕಾರಿಗಳಾದ ಎಂ.ರೇಣುಕಾ ರವರು ಸುದ್ದಿ ಮಾಧ್ಯಮದ ಮೂಲಕ ಚುನಾವಣೆಯ ಪ್ರಕಟಣೆಯನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಪೋಲೀಸ್ ಇಲಾಖೆಯ ಡಿ.ವೈ.ಎ.ಸ್ಪಿ ಮಲ್ಲೇಶಪ್ಪ ಮಲ್ಲಾಪುರ್, ಹಾಗೂ ಸಿ.ಪಿ.ಐ ತಳವಾರ್ ಸುರೇಶ್ ಮತ್ತು ಪಿ.ಎಸ್.ಐ.ಪ್ರಕಾಶ್ ರವರ ಬಿಗಿ ಬಂದೋಬಸ್ತ್ ನೊಂದಿಗೆ ಚುನಾವಣೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಸಂಸದರಾದ ಈ ತುಕಾರಾಂ ರವರು ಹಾಜರಿದ್ದು. ಹಾಗೂ ಮಾನ್ಯ ಶಾಸಕರಾದ ಎನ್.ಟಿ ಶ್ರೀನಿವಾಸ್ ಹಾಗೂ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿಗಳಾದ ಮುಗುಳಿ, ಹಾಗೂ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರಾದ ಗುರು ಸಿದ್ದನಗೌಡ್ರು, ಕಾಂಗ್ರೆಸ್ ಮುಖಂಡರಾದ ಅಶ್ವಮೇಧ ಮಲ್ಲಿಕಾರ್ಜುನ್, ಹಾಗೂ ಕಾಂಗ್ರೆಸ್ ಮುಖಂಡರು ಮತ್ತು ವೀರಶೈವ ಸಮಾಜದ ತಾಲೂಕ ಅಧ್ಯಕ್ಷರಾದ ಸುನಿಲ್ ಗೌಡ್ರು, ಕಾಂಗ್ರೆಸ್ ಮಹಿಳಾ ಮುಖಂಡರಾದ ಜಿಂಕಲ್ ನಾಗಮಣಿ, ಎಸ್.ಸುರೇಶ್ ಕಾಂಗ್ರೆಸ್ ಮುಖಂಡ ಹಾಗೂ ವಾಲ್ಮೀಕಿ ಸಂಘದ ಅಧ್ಯಕ್ಷರು ಕಾಂಗ್ರೆಸ್ ಎಸಿ ಮೋರ್ಚದ ಜಿಲ್ಲಾ ಉಪಾಧ್ಯಕ್ಷರಾದ ಡಿ ಎಚ್ ದುರ್ಗೇಶ್ ಭಾಗವಹಿಸಿದ್ದು. ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷರಿಗೆ ಮಾನ್ಯ ಸಂಸದರು ಶಾಸಕರು ಹಾಗೂ ಕಾಂಗ್ರೆಸ್ ಮುಖಂಡರುಗಳು ಸಿಹಿ ತಿನಿಸುವುದರೊಂದಿಗೆ ಪಟಾಕಿ ಹಚ್ಚಿ ಸಂಭ್ರಮಿಸಿದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ರಾಘವೇಂದ್ರ. ಬಿ.ಸಾಲುಮನೆ.**
**ಕೂಡ್ಲಿಗಿ.ವಿಜಯನಗರ**

# ರಾಜಗುರುಗೆ ನಾಟಕ ಅಕಾಡೆಮಿ ಪ್ರಶಸ್ತಿ



**ಮಹಾಲಿಂಗಪುರ :** ಯುವ ರಂಗ ಕಲಾವಿದ, ಗಾಯಕ ರಾಜಗುರು ಹೊಸಕೋಟೆ ಅವರಿಗೆ 2023–24 ಸಾಲಿನ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ.

ಪಟ್ಟಣದ ಹಿರಿಯ ಜಾನಪದ ಕಲಾವಿದ ಗುರುರಾಜ ಹೊಸಕೋಟಿ ಅವರ ಪುತ್ರ ರಾಜಗುರು ಬೆಂಗಳೂರಿನಲ್ಲಿ ನೆಲೆಸಿ ರಂಗ ಚಟುವಟಿಕೆಯಲ್ಲಿ ಕ್ರಿಯಾಶೀಲರಾಗಿದ್ದಾರೆ.

ರಾಜಗುರು ಅನೇಕ ರಂಗ ನಾಟಕಗಳನ್ನು ರಚಿಸಿದ್ದಾರೆ. ನಾಟಕಗಳ ನಿರ್ದೇಶನ ಮಾಡಿದ್ದಾರೆ. 5,000ಕ್ಕೂ ಹೆಚ್ಚು ರಂಗ ಪ್ರದರ್ಶನ ನೀಡಿದ್ದಾರೆ. ಅವರು ರಚಿಸಿದ 55 ನಿಮಿಷಗಳ ಪ್ರೇಮಕಥೆ ನಾಟಕ ರಾಜ್ಯದ 31 ಜಿಲ್ಲೆಗಳಲ್ಲಿ ಏಕ ಕಾಲಕ್ಕೆ ಪ್ರದರ್ಶನಗೊಂಡು ದಾಖಲೆ ನಿರ್ಮಿಸಿದೆ.ಇದು ಪ್ರತಿಷ್ಠಿತ ಲಿಮ್ಕಾ ಬುಕ್ ಆಫ್ ರಿಕಾರ್ಡ್ಸ್‌ದಲ್ಲಿ ದಾಖಲಾಗಿದೆ.ಕಳೆದ ಸಾಲಿನಲ್ಲಿ ಅವರಿಗೆ ಕೇಂದ್ರ ನಾಟಕ ಅಕಾಡೆಮಿಯ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪ್ರಶಸ್ತಿ ದೊರೆತಿತ್ತು.

ನನ್ನ ಮಗ ರಾಜಗುರು ಕ್ರಿಯಾಶೀಲ ರಂಗ ಕಲಾವಿದ ಆತನ ಪತ್ನಿ ನಯನಾ ಕೂಡಾ ರಂಗ ಕಲಾವಿದೆ.ಆಕೆ ಕೂಡಾ ವಿದ್ಯಾವಂತರು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ.ಇಬ್ಬರೂ ಸೇರಿ ನಾಟಕದ ವೈಭವವನ್ನು ಮರಳಿ ತರುತ್ತಿದ್ದಾರೆ. ಗಿರೀಶ ಕಾರ್ನಾಡ, ಬಿ.ವಿ.ಕಾರಂತರು ಇದ್ದಾಗಿನ ನಾಟಕಗಳ ವೈಭವ ವನ್ನು ಇವರು ಮರಳಿ ತರಲಿ ಎಂಬುದೇ ನನ್ನ ಆಶಯವಾಗಿದೆ. ರಾಜಗುರುಗೆ ನಾಟಕ ಅಕಾಡೆಮಿ ಪ್ರಶಸ್ತಿ ಬಂದಿದ್ದು ಬಹಳ ಸಂತೋಷವಾಗಿದೆ ಎನ್ನುತ್ತಾರೆ ಮಹಾಲಿಂಗಪುರದ ಖ್ಯಾತ ಜಾನಪದ ಕಲಾವಿದ ಗುರುರಾಜ ಹೊಸಕೋಟೆ.

# ಸರಕಾರಿ ಶಾಲೆಗಳ ಅಭಿವೃದ್ಧಿಗೆ ಸಾರ್ವಜನಿಕರ ಸಹಕಾರ ಅವಶ್ಯ: ಹಳಮನಿ




**ಮಹಾಲಿಂಗಪುರ :** ಸರಕಾರಿ ಶಾಲೆಗಳ ಅಭಿವೃದ್ಧಿಗೆ ಸಾರ್ವಜನಿಕರ ಸಹಕಾರ ಅವಶ್ಯವಾಗಿದೆ. ಗ್ರಾಮೀಣ ಭಾಗಗಳಲ್ಲಿ ಸ್ಪಂದನೆ ದೊರೆಯುತ್ತಿರುವುದು ಸಂತಸದ ಸಂಗತಿ ಎಂದು ಶಿಕ್ಷಣ ಸಂಯೋಜಕ ಬಿ.ಎಂ ಹಳಮನಿ ಹೇಳಿದರು.

ಸಮೀಪದ ಚಿಮ್ಮಡ ಗ್ರಾಮದ ಸರಕಾರಿ ಹೆಣ್ಣು ಮಕ್ಕಳ ಹಿರಿಯ ಮಾದರಿ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಎಸ್ಡಿಎಂಸಿ ಸದಸ್ಯರಿಂದ ನೀಡಲಾದ ವಿಶೇಷ ಸಮವಸ್ತ್ರ ವಿತರಣಾ ಕಾರ್ಯಕ್ರಮದಲ್ಲಿ ಅಥಿತಿಗಳಾಗಿ ಮಾತನಾಡಿದ ಅವರು ಸರಕಾರ ಹಲವಾರು ಸೌಲಭ್ಯಗಳನ್ನು ನೀಡುತಿದ್ದರೂ ವಿಶೇಷ ಸೌಲಭ್ಯಗಳನ್ನು ಸರಕಾರಿ ಶಾಲೆಗಳಿಗೆ ನೀಡುವ ಮೂಲಕ ಖಾಸಗಿ ಶಾಲೆಗಳೊಂದಿಗೆ ಪೈಪೋಟಿ ನೀಡುತ್ತಿವೆ. ಇದಕ್ಕೆ ಸಹಾಯ ಸಹಕಾರ ನೀಡುತ್ತಿರುವ ಶಾಲಾ ಸುಧಾರಣಾ ಸಮೀತಿ ಹಾಗೂ ಗ್ರಾಮದ ಶಿಕ್ಷಣ ಪ್ರೇಮಿಗಳಕಾರ್ಯ ಶ್ಲಾಘನೀಯ ಎಂದರು.

ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗೆ ವಿಶೇಷ ಸಮವಸ್ತ್ರ ವಿತರಿಸುವ ಮೂಲಕ ಉದ್ಘಾಟಿಸಲಾಯಿತು.

ಸಿಆರ್‌ಪಿ ಶ್ರೀಮತಿ ದ್ರಾಕ್ಷಾಯಿಣಿ ಮಂಡಿ, ಗ್ರಾ.ಪಂ. ಸದಸ್ಯ ಮಹಾಲಿಂಗ ಮಾಯಣ್ಣವರ, ಶಿವಾನಂದ ಬೆಳಗಲಿ, ಪ್ರಭಾರಿ ಮುಖ್ಯಗುರು ಎಸ್.ಎ. ಬಿರಾದರ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ಡಿಎಂಸಿ ಅಧ್ಯಕ್ಷ ಮೋನೇಶ ಬಡಿಗೇರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎಸ್‌ಡಿಎಸ್‌ಸಿ ಉಪಾಧ್ಯಕ್ಷೆ ಶ್ರೀಮತಿ ಅಣ್ಣಪೂರ್ಣ ಅಥಣಿ, ಇಮಾಮ ಯಾದವಾಡ, ಪರಪ್ಪಾ ದೇವಗೋಳ ಇದ್ದರು. ಶಿಕ್ಷಕ ಬಿ.ಡಿ.ನೇಮಗೌಡ ಸ್ವಾಗತಿಸಿ ನಿರೂಪಿಸಿದರು.

# ಗ್ರಾಮೀಣ ಸಂಸ್ಕೃತಿ ಪ್ರತಿಷ್ಠಾನ ವೇದಿಕೆ ವತಿಯಿಂದ 'ಶ್ರಾವಣ ಸಂಭ್ರಮ, ಸಾಹಿತ್ಯ ಸಾಂಸ್ಕೃತಿಕ ಸಂಗಮ'





**ನೆಲಮಂಗಲ :** 'ಮಾನವ ಜನ್ಮ ದೊಡ್ಡದು ಎನ್ನುತ್ತಾರೆ. ಅಂತಹ ಜನ್ಮವನ್ನು ಸಾರ್ಥಕಗೊಳಿಸಬೇಕಾದರೆ ಒಳಿತು ಮಾಡು ಮನುಷ್ಯ ನೀನಿರುವುದು ಮೂರು ದಿವಸ' ಎಂಬುದನ್ನು ಅರಿತು, ಇಂತಹ ಕಾರ್ಯಕ್ರಮಗಳ ಮೂಲಕ ಸಮಾಜದಲ್ಲಿ ಸಾರ್ಥಕತೆಗೆ ಕಾರಣವಾಗಬೇಕು' ಎಂದು ಭವಾನಿ ಶಂಕರ್ ಗ್ರೂಪ್ ಮಾಲೀಕರಾದ ಬೈರೇಗೌಡರು ತಿಳಿಸಿದರು. ಅವರು ಗ್ರಾಮೀಣ ಸಂಸ್ಕೃತಿ ಪ್ರತಿಷ್ಠಾನ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕವಿಗೋಷ್ಠಿ, ಸಾಧಕರಿಗೆ ಸನ್ಮಾನ, ಚಿಂತನಾಗೋಷ್ಠಿ, ಭಜನಾ ಗೋಷ್ಠಿ, ನೃತ್ಯಕಲಾ ಪ್ರದರ್ಶನ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

'ಗಿಡ ಮರ ನದಿಗಳನ್ನು ಆರಾಧಿಸುವ ಪರಿಸರ ಪ್ರಿಯ ಸಂಸ್ಕೃತಿ ನಮ್ಮದು. ದೇವನೊಬ್ಬ ನಾಮ ಹಲವು ಎನ್ನುವಂತೆ ವಿಭಿನ್ನ ದೇವರುಗಳನ್ನು ಆರಾಧಿಸುತ್ತಾ ವಿಭಿನ್ನ ಬಗೆಯ ಸಂಸ್ಕೃತಿಯನ್ನು ಪೋಷಿಸಿಕೊಂಡು ಬಂದವರು ನಾವುಗಳು. ವಿದೇಶಿಯರಿಂದ ನಮ್ಮ ಸಂಸ್ಕೃತಿಯನ್ನು ಹಾಳು ಮಾಡುವ ಪ್ರಯತ್ನ ನಡೆದರೂ ಅದನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದೇವೆ. ಗ್ರಾಮೀಣ ಸಂಸ್ಕೃತಿ ಪ್ರತಿಷ್ಠಾನದವರು ಇದನ್ನು ಮುಂದುವರಿಸುವ ಕೆಲಸವನ್ನು ಮಾಡುತ್ತಿರುವುದು ಸಂತೋಷದಾಯಕ' ಎಂದು ಜಿಲ್ಲಾ ಭಾಜಪ ಅಧ್ಯಕ್ಷರಾದ ರಾಮಕೃಷ್ಣಪ್ಪನವರು ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಚಿಂತಕ ಲೇಖಕ ಅಂಕಣಕಾರ ಮಣ್ಣೆ ಮೋಹನ್ ರವರು ಮಾತನಾಡಿ 'ಯುಗಾದಿಯ ಹೊಸ ವರ್ಷದಿಂದ ಆರಂಭವಾದ ನಮ್ಮ ಸಾಂಸ್ಕೃತಿಕ ವೈಭವವು ಹಳ್ಳಿಯ ಜಾತ್ರೆಗಳು, ಕೃಷಿ ಚಟುವಟಿಕೆಗಳು, ಬಸವ ಜಯಂತಿ, ಏಕಾದಶಿ, ನಾಗರ ಪಂಚಮಿ, ವರಮಹಾಲಕ್ಷ್ಮಿ ಹಬ್ಬ, ಗೌರಿ ಗಣೇಶ ಹಬ್ಬ, ದಸರಾ ಆಚರಣೆ, ಮಹಾಲಯ ಅಮಾವಾಸ್ಯೆ, ದೀಪಾವಳಿ ಸಂಭ್ರಮ, ಶ್ರಾವಣ ಕಾರ್ತಿಕ ಧನುರ್ಮಾಸಗಳ ಆಚರಣೆ, ಸಂಕ್ರಾಂತಿ, ಶಿವರಾತ್ರಿ ಮತ್ತೆ ಯುಗಾದಿಯವರೆಗೂ ವೈವಿಧ್ಯಮಯವಾಗಿ ರೂಪುಗೊಳ್ಳುವುದರ ಮೂಲಕ ನಮಗೆ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ತಂದುಕೊಟ್ಟಿದೆ. ಸಾವಿರಾರು ವರ್ಷಗಳಿಂದ ಬಳುವಳಿಯಾಗಿ ಬಂದ ಈ ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ತಲೆಮಾರಿಗೆ ದಾಟಿಸುವ ಜವಾಬ್ದಾರಿ ನನ್ನೆಲ್ಲರದ್ದಾಗಿದೆ' ಎಂದರು.

ತಾಲೂಕು ಕಸಾಪ ಅಧ್ಯಕ್ಷರಾದ ಪ್ರಕಾಶ್ ಮೂರ್ತಿಯವರು ಮಾತನಾಡಿ 'ಶ್ರಾವಣ ಮಾಸದಲ್ಲಿ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವೇದಿಕೆ ಒದಗಿಸಿಕೊಟ್ಟಿರುವ ಗ್ರಾಮೀಣ ಸಂಸ್ಕೃತಿ ಪ್ರತಿಷ್ಠಾನ ವೇದಿಕೆಯ ಕಾರ್ಯ ಶ್ಲಾಘನೀಯ' ಎಂದರು. ಹಿರಿಯ ಸಾಹಿತಿ ಬಿದಲೂರು ಸೋಮಣ್ಣನವರು ಮಾತನಾಡಿ 'ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನು ಆಶ್ರಯದಾತ ರಾಜನು ಅಂಬಾರಿ ಮೇಲಿಟ್ಟು ಮೆರವಣಿಗೆ ಮಾಡಿ ಅದರ ಶ್ರೇಷ್ಠತೆಯನ್ನು ಸಾರಿದ. ಆದರೆ ರಾಘವಾಂಕನ ಗುರುಗಳಾದ ಹರಿಹರನು ಇಂತಹ ಹಮ್ಮು-ಬಿಮ್ಮುಗಳು ಸಾಹಿತಿಯೊಬ್ಬನನ್ನು ಶ್ರೇಷ್ಠಗೊಳಿಸುವುದಿಲ್ಲವೆಂದು ತಿಳಿಸಿ ವಿನಯಶೀಲತೆಯ ಮಹತ್ವವನ್ನು ಸಾರಿದನು' ಎಂದರು

'ಗ್ರಾಮೀಣ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಅನೇಕ ಸಂಘ-ಸಂಸ್ಥೆಗಳು ಬೇಕು. ಆ ನಿಟ್ಟಿನಲ್ಲಿ ಗ್ರಾಮೀಣ ಸಂಸ್ಕೃತಿ ಪ್ರತಿಷ್ಠಾನವು ಶ್ರಮಿಸುತ್ತಿದೆ' ಎಂದು ಮಕ್ಕಳ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷರಾದ ಎನ್ ಜಿ ಗೋಪಾಲ್ ರವರು ತಿಳಿಸಿದರು.

ಸದಾನಂದ ಆರಾಧ್ಯ ರವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಈ ಕಾರ್ಯಕ್ರಮ ಯಶಸ್ವಿಗೊಳಿಸಲು ಕಾರಣರಾದ ಎಲ್ಲರನ್ನು ಸ್ಮರಿಸಿ, ಧನ್ಯವಾದಗಳನ್ನು ಅರ್ಪಿಸಿದರು. 'ದೇವರು ಎಂಬುದು ಸರ್ವಾಂತರ್ಯಾಮಿ, ಸರ್ವಶಕ್ತ, ಸರ್ವಜ್ಞ, ನಮ್ಮಲ್ಲಿರುವ ಕಷ್ಟ ಕಾರ್ಪಣ್ಯಗಳನ್ನು ನೀಗಿಸುವ ಒಂದೇ ಒಂದು ಜಾಗವೆಂದರೆ ಅದು ದೇವಸ್ಥಾನ. ಎಲ್ಲಿ ಒಳ್ಳೆಯ ಕೆಲಸ ನಡೆಯುತ್ತಿರುತ್ತದೆಯೋ ಅದೇ ದೇವಸ್ಥಾನ. ನಾವು ಮಾಡುವ ಕಾಯಕವೇ ದೇವರ ಸ್ವರೂಪ' ಎಂದು ಆಶಯ ನುಡಿಗಳನ್ನಾಡಿದ ಪ್ರಾಧ್ಯಾಪಕ ಚಿಂತಕ ಗಂಗರಾಜುರವರು ತಿಳಿಸಿದರು.

'ಮೊದಲು ದೇವಾಲಯಗಳಲ್ಲಿ ಕಲ್ಲಿನ ಮೂರ್ತಿಗಳಿದ್ದವು, ಅಲ್ಲಿಗೆ ಭೇಟಿ ನೀಡುತ್ತಿದ್ದ ಭಕ್ತರ ಮನಸ್ಸುಗಳು ಚಿನ್ನದಂತಿದ್ದವು. ಆದರೆ ಈಗ ದೇವಾಲಯಗಳಲ್ಲಿ ಚಿನ್ನದ ಮೂರ್ತಿಗಳಿವೆ, ಭಕ್ತರ ಮನಸ್ಸುಗಳು ಕಲ್ಲಾಗಿವೆ' ಎಂದು ಕಾರ್ಯಕ್ರಮದ ಅದ್ಭುತ ನಿರೂಪಣೆ ಮಾಡಿದ ಡಾ ವೆಂಕಟೇಶ್ ಚೌತಾಯಿ ಅವರು ತಿಳಿಸಿದರು.

ಡಾ. ಎನ್ ಮುರಳಿಧರ್ ರವರ 'ಆಗಂತುಕ' ಕಾದಂಬರಿಯನ್ನು ಅನಾವರಣಗೊಳಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಎಲ್ಲರಿಗೂ ಅಭಿನಂದನೆಗಳನ್ನು ತಿಳಿಸಿದರು. ರಕ್ಷಣಾ ಕ್ಷೇತ್ರದ ಸಾಧನೆಗಾಗಿ ಮಾಜಿ ಸೈನಿಕರಾದ ಸುರೇಶ್, ಪತ್ರಿಕೋದ್ಯಮ ಕ್ಷೇತ್ರದ ಸಾಧನೆಗಾಗಿ ವಿಜಯ ಹೊಸಪಾಳ್ಯ, ಕ್ರೀಡಾ ಕ್ಷೇತ್ರದ ಸಾಧನೆಗಾಗಿ ಕುಸ್ತಿಪಟು ದಿನೇಶ್ರವರನ್ನು ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಶಿವಪ್ರಸಾದ್ ಆರಾಧ್ಯರವರ ಕಲಾ ಕೃತಿಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ನಗರ ಸಭೆ ಸದಸ್ಯರಾದ ಅಂಜನಮೂರ್ತಿ(ಪಾಪಣ್ಣಿ), ಮಾಜಿ ಕಸಾಪ ಅಧ್ಯಕ್ಷರಾದ ಲಯನ್ ಪ್ರಕಾಶ್, ಡಾ ಭೋಗಣ್ಣ, ವೀರಸಾಗರ ಬಾನುಪ್ರಕಾಶ್, ಸತೀಶ್, ದಿನೇಶ್, ರಕ್ಷಣಾ ವೇದಿಕೆಯ ಸುರೇಶ್, ಮೊದಲಾದವರು ಉಪಸ್ಥಿತರಿದ್ದರು.

ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಜನಾ ಮಂಡಳಿ ವತಿಯಿಂದ ಪ್ರಾರ್ಥನೆ, ಗಾನಸಂಗಮ ತಂಡದಿಂದ ಗೀತ ಗಾಯನ ನೆರವೇರಿತು. ಬಲವಂತ ಮೊರಟಗಿ ಸ್ವಾಗತ ಕೋರಿದರು. ಕವಿ ಆನಂದ ಮೌರ್ಯ ವಂದನಾರ್ಪಣೆ ನೆರವೇರಿಸಿದರು. ಕುಮಾರಿ ಜೀವಿತಾರವರಿಂದ ಭರತನಾಟ್ಯ, ಜೀವನ್ ರವರಿಂದ ಶಿವ ತಾಂಡವ ನೃತ್ಯ ಪ್ರದರ್ಶನ ಪ್ರದರ್ಶಿತವಾಯಿತು.

ಎನ್ ಆರ್ ನಾಗರಾಜು, ಎಚ್ ಎಮ್ ನಾಗರಾಜು, ಬಲವಂತ ಮೊರಟಗಿ, ಚೆನ್ನಪ್ಪ ಎಂ ತೇಕೂರ, ಕೃಷ್ಣಯ್ಯ, ಜನಾರ್ಧನ, ಬ್ಯಾಡನೂರು ವೀರಭದ್ರಪ್ಪ, ನೂರುದ್ದೀನ್, ಪುಟ್ಟರಾಜು, ಲತಾ, ರಶ್ಮಿ, ಶ್ವೇತ, ವೀಣಾ, ಅನಿಲ್ ಕುಮಾರ್, ಆಕಾಶ್, ಶ್ರೀನಿವಾಸ್, ಪ್ರೇಮಕುಮಾರ್, ಶಿವಪ್ರಸಾದ್ ಆರಾಧ್ಯ, ಸಿರಾಜ್ ಅಹಮದ್ ಮುಂತಾದವರು ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

**ವರದಿ: ಮಣ್ಣೆ ಮೋಹನ್**

# ಶ್ರಾವಣ ಸೋಮವಾರ ನಿರಂತರ ಪ್ರಸಾದ ಸೇವೆ



**ಬನಹಟ್ಟಿ :** ಸ್ಥಳೀಯ ಕಾಡಸಿದ್ಧೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದಲ್ಲಿ ಬರುವ ಪ್ರತಿ ಸೋಮವಾರ ದೇವಸ್ಥಾನದ ಆವರಣದಲ್ಲಿ ನಿರಂತರವಾಗಿ ಪ್ರಸಾದ ಸೇವೆಯನ್ನು ಭಕ್ತರು ನಡೆಸಿಕೊಂಡು ಬರುತ್ತಿದ್ದಾರೆ. ಅನ್ನ ದಾಸೋಹ ಶ್ರೇಷ್ಠವಾದುದು ಎಂದು ಇಲ್ಲಿನ ಕಾಡಸಿದ್ಧೇಶ್ವರ ದೇವಸ್ಥಾನದ ಅರ್ಚಕರಾದ ಶಿವರುದ್ರಯ್ಯ ಕಾಡದೇವರ ತಿಳಿಸಿದರು.

ಸೋಮವಾರ ಇಲ್ಲಿನ ಕಾಡಸಿದ್ಧೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಪ್ರಸಾದ ಸೇವೆಗೆ ಅವರು ಚಾಲನೆ ನೀಡಿ ಮಾತನಾಡಿದರು. ಬ್ರಿಜ್ಮೋಹನ ಚಿಂಡಕ ಮಾತನಾಡಿ, ಶ್ರಾವಣ ಮಾಸದ ಸೋಮವಾರ ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಪ್ರಸಾದ ಸೇವೆಯನ್ನು ಹಮ್ಮಿಕೊಳ್ಳಲಾಗಿದೆ. ದೇವಸ್ಥಾನಕ್ಕೆ ಬರುವ ಎಲ್ಲ ಭಕ್ತರಿಗೆ ಪ್ರಸಾದ ಸೇವೆಯನ್ನು ನೀಡುತ್ತಿರುವುದಕ್ಕೆ ಸ್ಥಳೀಯರು ಸಾಕಷ್ಟು ಪ್ರೋತ್ಸಾಹ ನೀಡುತ್ತ ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಕಾಡಪ್ಪ ಬಾಬಾನಗರ, ಶ್ರೀಶೈಲ ಬೀಳಗಿ, ಮೋಹನ ಪತ್ತಾರ, ಶ್ರೀಶೈಲ ಅಥಣಿ, ದುಂಡಯ್ಯ ಕಾಡದೇವರ, ರುದ್ರಯ್ಯ ಕಾಡದೇವರ, ಶಿಖರೆಪ್ಪ ಮುಗತಿ, ಅಂದಾನಯ್ಯ ಕಾಡದೇವರ, ಬಸಯ್ಯ ಕಾಡದೇವರ, ನಿಜಗುಣಿ ಕಾಡದೇವರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ವಿದ್ಯಾರ್ಥಿಗಳು ಗ್ರಂಥಾಲಯದ ಸದ್ಬಳಕೆ ಮಾಡಿಕೊಳ್ಳಬೇಕು



**ರಬಕವಿ-ಬನಹಟ್ಟಿ :** ಗ್ರಂಥಾಲಯಗಳು ಜ್ಞಾನ ದೇಗುಲಗಳು. ಗ್ರಂಥಾಲಯಗಳಲ್ಲಿ ಹೆಚ್ಚಿನ ಸಮಯವನ್ನು ಕಳೆಯುವುದರಿಂದ ಉತ್ತಮ ಜ್ಞಾನವನ್ನು ಪಡೆದುಕೊಳ್ಳಲು ಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳು ಗ್ರಂಥಾಲಯದ ಸದ್ಬಳಕೆಯನ್ನು ಮಾಡಿಕೊಳ್ಳಬೇಕು ಎಂದು ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜಿನ ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್ ಹೇಳಿದರು.

ಸೋಮವಾರ ಇಲ್ಲಿನ ಎಸ್. ಟಿ. ಸಿ. ಕಾಲೇಜಿನ ಗ್ರಂಥಾಲಯದಲ್ಲಿ ಗ್ರಂಥಾಲಯ ಪಿತಾಮಹ ಡಾ. ಎಸ್. ಆರ್. ರಂಗನಾಥರ ಜಯಂತ್ಯೋತ್ಸವದ ಅಂಗವಾಗಿ ರಂಗನಾಥರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಗ್ರಂಥಾಲಯದಲ್ಲಿ ಪಠ್ಯದ ಜೊತೆಗೆ ದಿನ ಪತ್ರಿಕೆಗಳು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾದ ಗ್ರಂಥಗಳು ಇದ್ದು , ಅವುಗಳನ್ನು ಓದುವುದರಿಂದ ನಮ್ಮಲ್ಲಿ ಸಾಮಾನ್ಯ ಜ್ಞಾನ ಕೂಡಾ ವೃದ್ಧಿಸುತ್ತದೆ. ದಿನಪತ್ರಿಕೆಗಳನ್ನು ನಿತ್ಯ ಓದುವುದರಿಂದ ನಮ್ಮ ಜ್ಞಾನ ಹೆಚ್ಚಾಗುತ್ತದೆ ಎಂದು ಜುನ್ನಾಯ್ಕರ್ ತಿಳಿಸಿದರು.

ಗ್ರಂಥಪಾಲಕ ಶಿವು ಇಟ್ನಾಳ ಮಾತನಾಡಿ, ಡಾ. ಎಸ್. ಆರ್. ರಂಗನಾಥರು ದೇಶ ವಿದೇಶಗಳಲ್ಲಿ ಗ್ರಂಥಾಲಯಗಳ ಅಭಿವೃದ್ಧಿಯ ಸಲುವಾಗಿ ತಮ್ಮದೆಯಾದ ತತ್ವಗಳಿಂದ ಪ್ರಸಿದ್ಧರಾಗಿದ್ದರು. ಅವರು ಗಣಿತ ಶಾಸ್ತ್ರಜ್ಞರಾಗಿದ್ದರೂ ಕೂಡ ಅವರು ಗ್ರಂಥಾಲಯ ವಿಭಾಗಕ್ಕೆ ಸಲ್ಲಿಸಿದ ಸೇವೆ ಅನುಪಮವಾದುದು ಎಂದು ತಿಳಿಸಿದರು.

ಉಪನ್ಯಾಸಕರಾದ ಶ್ವೇತಾ ಮಠದ, ಅವಿನಾಶ ಹಟ್ಟಿ, ರಮೇಶ ಹೂಗಾರ, ರಾಜೇಶ ಧರಿನಾಯಕ ಸೇರಿದಂತೆ ಅನೇಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಗ್ರಂಥಗಳ ಪ್ರದರ್ಶನವನ್ನು ಕೂಡಾ ಹಮ್ಮಿಕೊಳ್ಳಲಾಗಿತ್ತು.

# ಶಶಿಕಲಾರಿಗೆ ಅಧ್ಯಕ್ಷ ಸ್ಥಾನಕ್ಕಾಗಿ ಶಾಸಕರಿಗೆ ಒತ್ತಾಯ



**ರಬಕವಿ-ಬನಹಟ್ಟಿ :** ಬಿಜೆಪಿಯ ಹಿಡಿತದಲ್ಲಿರುವ ಇಲ್ಲಿನ ನಗರಸಭೆಗೆ ವಾರ್ಡ್ ಸಂಖ್ಯೆ 12 ರ ಸದಸ್ಯೆ ಶಶಿಕಲಾ ಸಾರವಾಡರಿಗೆ ಅಧ್ಯಕ್ಷ ಸ್ಥಾನ ಕಲ್ಪಿಸಬೇಕೆಂದು ಬಿಜೆಪಿ ಕಾರ್ಯಕರ್ತರು ಶಾಸಕ ಸಿದ್ದು ಸವದಿಯವರನ್ನು ಒತ್ತಾಯಿಸಿದರು.

ಕಾಡಪ್ಪ ಕಲಬುರಗಿ ಮಾತನಾಡಿ, ಪಕ್ಷದ ನಿಷ್ಠೆ ಪ್ರಾಮಾಣಿಕತೆ ಹಾಗು ಕೊಳಚೆ ಪ್ರದೇಶಗಳಲ್ಲಿನ ಸಮಸ್ಯೆಗಳ ಬಗ್ಗೆ ಅನುಭವ ಹೊಂದಿರುವ ಸಾರವಾಡರಿಗೆ ಈ ಬಾರಿಯ ಮೀಸಲಾತಿ ಸ್ಥಾನದ ಅರ್ಹ ವ್ಯಕ್ತಿಯನ್ನಾಗಿಸಿ ಸ್ಥಾನ ಒದಗಿಸಬೇಕೆಂದರು.

# ಪ್ರಾತಿನಿಧ್ಯಕ್ಕೆ ಪ್ರತಿನಿಧಿಗಳ ಒತ್ತಾಯ

**ರಬಕವಿ-ಬನಹಟ್ಟಿ :** ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ಬಾಗಲಕೋಟೆ ಜಿಲ್ಲೆಯಲ್ಲಿಯ ಎರಡನೇಯ ಅತಿ ದೊಡ್ಡ ನಗರಸಭೆ ಎಂಬ ಖ್ಯಾತಿ ಪಡೆದಿರುವ ನೇಕಾರ ನಗರಿ ರಬಕವಿ-ಬನಹಟ್ಟಿ ನಗರಸಭೆಗೆ ಇದೀಗ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನದ ಜಪ ಶುರುವಾಗಿದೆ.

31 ಸದಸ್ಯರನ್ನೊಳಗೊಂಡ ನಗರಸಭೆಗೆ 24 ಬಿಜೆಪಿ, 5 ಕಾಂಗ್ರೆಸ್ ಹಾಗು ಇಬ್ಬರು ಬಿಜೆಪಿ ಬೆಂಬಲಿತ ಪಕ್ಷೇತರ ಸದಸ್ಯರನ್ನು ಹೊಂದಿದ್ದು, ದಿ. 17 ರಂದುಜರುಗುವಅಧ್ಯಕ್ಷ-ಉಪಾಧ್ಯಕ್ಷಸ್ಥಾನಕ್ಕೆಇದೀಗಪ್ರದೇಶಪ್ರಾತಿನಿಧ್ಯದ ಬೇಡಿಕೆ ಬಲು ಜೋರಾಗಿದೆ. ಬನಹಟ್ಟಿ ಪಟ್ಟಣಕ್ಕೆ ಸರದಿಯಲ್ಲಿರುವ ಅಧ್ಯಕ್ಷ ಸ್ಥಾನದ ರೇಸ್ನಲ್ಲಿ ಸಾಮಾನ್ಯ ಮಹಿಳೆ 2 ಎ ವರ್ಗದಿಂದ ನಾಲ್ವರು ಪ್ರಮುಖವಾಗಿ ಆಕಾಂಕ್ಷಿದಾರರಾಗಿದ್ದಾರೆ. ಯಾರನ್ನೇ ಆಯ್ಕೆ ಮಾಡಿದರೂ ನಗರಸಭೆಯಾದಾಗಿನಿಂದ ಒಮ್ಮೆಯೂ ಗುಡ್ಡದ ಪ್ರದೇಶದ ಆಕಾಂಕ್ಷಿತರನ್ನು ಅಧ್ಯಕ್ಷ ಸ್ಥಾನದ ಪಟ್ಟಕ್ಕೇರಿಸಿಲ್ಲ. ಈ ಬಾರಿ ಮೀಸಲಾತಿ ಸದಾವಕಾಶ ಬಂದಿದ್ದು, ಹಿಂದುಳಿದ ವಾರ್ಡಗಳಲ್ಲಿರುವ ಯಾವದೇ ಬಿಜೆಪಿ ಸದಸ್ಯರಾಗಲಿ ಅಂಥವರನ್ನು ಅಧ್ಯಕ್ಷ ಸ್ಥಾನಕ್ಕೆ ಮೀಸಲಿರಿಸಬೇಕೆಂಬ ಒತ್ತಾಯ ಕೇಳಿಬರುತ್ತಿದೆ. ಇದರ ಮಧ್ಯೆ ಪಟ್ಟಣದ ಆಯಾ ವಾರ್ಡ್, ಓಣಿಗಳಲ್ಲಿ ತಮ್ಮ ತಮ್ಮ ಬೆಂಬಲಿಗರೊಂದಿಗೆ ಮಹತ್ವದ ಸಭೆಗಳನ್ನು ನಡೆಸುತ್ತ ಶಾಸಕ ಸೇರಿದಂತೆ ಪಕ್ಷದ ವರಿಷ್ಠರ ಭೆಟ್ಟಿಯಲ್ಲಿ ನಿರತರಾಗಿದ್ದಾರೆ. ಒಟ್ಟಾರೆ ಪಟ್ಟಣ ಹಾಗು ಗುಡ್ಡದ ಪ್ರದೇಶದ ಪ್ರಾತಿನಿಧ್ಯ ಮಧ್ಯ ಪ್ರತಿನಿಧಿಗಳು ಫೈಟ್ ನಡೆಸುತ್ತಿರುವದು ಈ ಬಾರಿಯ ವಿಶೇಷವಾಗಿದೆ.



ರಬಕವಿ-ಬನಹಟ್ಟಿ : ತಾಲೂಕಿನ ನಾವಲಗಿ ಗ್ರಾಮದಲ್ಲಿ ಕುರುಹಿನಶೆಟ್ಟಿ ಸಮಾಜದ ಹುಬ್ಬಳ್ಳಿ ವೀರಭಿಕ್ಷಾವರ್ತಿ ನೀಲಕಂಠ ಮಠದ ಜಗದ್ಗುರು ಲಿಂಗೈಕ್ಯ ಶ್ರೀ ಶಂಕರ ಶಿವಾಚಾರ್ಯರ 18 ನೇ ಪುಣ್ಯಸ್ಮರಣೆ ನಿಮಿತ್ಯ ನಡೆದ ಪಲ್ಲಕ್ಕಿ ಸೇವೆಯಲ್ಲಿ ಸಮಾಜ ಬಾಂಧವರು, ಗ್ರಾಮಸ್ಥರು ಶ್ರದ್ಧಾ-ಭಕ್ತಿಯಿಂದ ಪಾಲ್ಗೊಂಡಿದ್ದರು

# ಪ್ರವಾಹ ಪೀಡಿತ ಗ್ರಾಮಗಳಿಗೆ ಶಾಶ್ವತ ಪರಿಹಾರಕ್ಕೆ ರೈತರ ಒತ್ತಾಯ ಮುಧೋಳ ಬಂದ್‌ಗೆ ಅಭೂತಪೂರ್ವ ಬೆಂಬಲ



**ಮುಧೋಳ :** ಆಲಮಟ್ಟಿ ಹಿನ್ನೀರಿನಿಂದ ಮುಧೋಳ ತಾಲ್ಲೂಕಿನ ಇಪ್ಪತ್ತಕ್ಕೂ ಹೆಚ್ಚು ಗ್ರಾಮಗಳು ಮುಳುಗಡೆಯಾಗುತ್ತಿದ್ದು ಅವುಗಳಿಗೆ ಶಾಶ್ವತ ಪರಿಹಾರ ನೀಡಬೇಕು ಎಂದು ರೈತರು ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಸಾವಿರಾರು ಸಂಖ್ಯೆಯಲ್ಲಿ ರೈತರು ಸೇರಿ ಸಂಗೊಳ್ಳಿ ರಾಯಣ್ಣ ವೃತ್ತದಿಂದ ನಗರದ ಪ್ರಮುಖ ಬೀದಿಗಳಲ್ಲಿ ಹಾದು ತಹಸೀಲ್ದಾರ್ ಕಚೇರಿವರೆಗೆ ಪ್ರತಿಭಟನೆ ಮೆರವಣಿಗೆ ನಡೆಸಿದರು.

ಸೋಮವಾರ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ನಗರದಲ್ಲಿನ ಅಂಗಡಿ ಮುಂಗಟ್ಟುಗಳನ್ನು ವ್ಯಾಪಾರಸ್ಥರು ಸ್ವಯಂ ಸ್ಫೂರ್ತಿಯಿಂದ ಬಂದ್ ಮಾಡಿ ರೈತರ ಹೋರಾಟಕ್ಕೆ ಬೆಂಬಲ ನೀಡಿದರು. ಸಾರ್ವಜನಿಕರು ಕೂಡಾ ಬಂದ್ ಕರೆಗೆ ಸ್ಪಂದಿಸಿ ತಮ್ಮ ಕೆಲಸಗಳಿಗೆ ವಿರಾಮ ನೀಡಿ ಬೆಂಬಲ ನೀಡಿದರು. ಆಟೋ ಚಾಲಕರು, ಕಾರ್ ಹಾಗೂ ಟಂ ಟಂ ಸೇರಿದಂತೆ ಖಾಸಗೀ ವಾಹನಗಳು ಕೂಡ ರಸ್ತೆಗಿಳಿಯದ್ದರಿಂದ ರಸ್ತೆಗಳು ಬಿಕೋ ಎನ್ನುತ್ತಿದ್ದವು.

ಮೆರವಣಿಗೆಯುದ್ದಕ್ಕೂ ರೈತರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತ ಶಾಂತಿಯುತ ಪ್ರತಿಭಟನೆ ನಡೆಸಿದರು.

ನಗರದಿಂದ ಪ್ರೊ ಊರಿಗೆ ಹೋಗುವ ಬಸ್ ಗಳನ್ನು, ನಗರದಿಂದ ಗ್ರಾಮೀಣ ಭಾಗಗಳಿಗೆ ಹೋಗುವ ಬಸ್ ಗಳನ್ನು ಹಾಗು ವಾಹನಗಳನ್ನು ದೂರದಲ್ಲಿಯೇ ತಡೆದು ಪ್ರತಿಭಟನೆ ಶಾಂತಿಯುತವಾಗಿ ನಡೆಯುವಂತೆ ಸಹಕರಿಸಿದರು. ಸ್ಥಳಕ್ಕೆ ಆಗಮಿಸಿದ್ದ ಜಿಲ್ಲಾಧಿಕಾರಿ ಕೆ. ಜಾನಕಿಯವರಿಗೆ ರೈತರು ಶಾಶ್ವತ ಪರಿಹಾರಕ್ಕಾಗಿ ಮನವಿ ಸಲ್ಲಿಸಿದರು. ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಜಮಖಂಡಿಯ ಕಂದಾಯ ಉಪವಿಭಾಗಾಧಿಕಾರಿ ಶ್ವೇತಾ ಬೀಡಕರ ಉಪಸ್ಥಿತರಿದ್ದರು.

# ಮಾನವ ಹಕ್ಕು ಉಲ್ಲಂಘನೆ ಆಗದಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು




**ಧಾರವಾಡ :** ಮಾನವ ಹಕ್ಕುಗಳ ಸಂರಕ್ಷಣೆ ಮತ್ತು ಉಲ್ಲಂಘನೆಯನ್ನು ತಡೆಯುವುದು ಇದರ ಮೂಲ ಉದ್ದೇಶವಾಗಿದೆ. ಹಾಗೆಯೇ ಮಾನವ ಹಕ್ಕುಗಳು ಉಲ್ಲಂಘನೆ ಆಗದಂತೆ ಸರ್ಕಾರದ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಟಿ.ಶ್ಯಾಮ ಭಟ್ ಅವರು ಹೇಳಿದರು.

ಅವರು ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ ಆಯೋಜಿಸಲಾದ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ಜರುಗಿಸಿ, ಮಾತನಾಡಿದರು.

ರಾಜ್ಯ ಮಟ್ಟದಲ್ಲಿ 2023 ರಿಂದ ಇಲ್ಲಿವರೆಗೆ ಬಾಕಿ ಇದ್ದ ಒಟ್ಟು ಎಂಟು ಸಾವಿರ ಪ್ರಕರಣಗಳಲ್ಲಿ 5100 ಪ್ರಕರಣಗಳನ್ನು ವಿಲೇವಾರಿ ಮಾಡಿದ್ದು, ಇನ್ನು 2900 ಪ್ರಕರಣಗಳು ವಿಲೇವಾರಿ ಹಂತದಲ್ಲಿವೆ. ರಾಜ್ಯ ಮಟ್ಟದಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದ ಆಯೋಗವು ಹೊಸ ಯೋಜನೆಯನ್ನು ರೂಪಿಸಿ, ಪ್ರತಿ ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕರಿಗೆ ಸೇವೆಯನ್ನು ನೀಡುವ ಉದ್ದೇಶವನ್ನು ಹೊಂದಿದೆ. ಹಾಗೂ ಬಾಕಿ ಇರುವಂತಹ ಪ್ರಕರಣಗಳನ್ನು ಆದಷ್ಟು ಬೇಗ ವಿಲೇವಾರಿ ಮಾಡಲಾಗುವುದು ಎಂದು ಅವರು ತಿಳಿಸಿದರು.

ಧಾರವಾಡ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಒಟ್ಟು 46 ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ 22 ಪ್ರಕರಣಗಳು ಪರಿಹಾರ ಬಾಕಿಯಲ್ಲಿ ಇದೆ. ಇದರಲ್ಲಿ 18 ಪ್ರಕರಣಗಳು ಜಿಲ್ಲಾ ಮಟ್ಟದಲ್ಲಿ ಬಾಕಿ ಇವೆ ಎಂದು ಅವರು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಮಾನವ ಹಕ್ಕುಗಳ ಆಯೋಗದ ಹೆಸರು ಹೇಳಿ ಕೆಲವರು ದುರುಪಯೋಗ ಪಡೆಯುವ ಕುರಿತು ಆಯೋಗಕ್ಕೆ ದೂರುಗಳು ಬಂದಿವೆ. ಇಂತಹ ಸುಳ್ಳು ದಾಖಲೆ ಇರುವಂತಹ ಸಂಸ್ಥೆ ಮತ್ತು ವ್ಯಕ್ತಿಗಳ ಮೇಲೆ ಪ್ರಕರಣ ದಾಖಲಿಸಿ ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿ, ಮುಂದಿನ ದಿನಮಾನಗಳಲ್ಲಿ ಆದಷ್ಟು ಕಡಿಮೆ ಅವಧಿಯಲ್ಲಿ ಪ್ರಕರಣಗಳನ್ನು ವಿಲೇವಾರಿ ಮಾಡಲಾಗುವುದು ಎಂದು ಅವರು ತಿಳಿಸಿದರು.

ಮಾನವ ಹಕ್ಕುಗಳ ಆಯೋಗದ ಸದಸ್ಯ ಎಸ್.ಕೆ.ವಂಟಗೋಡಿ ಅವರು ಮಾತನಾಡಿ, ಪ್ರತಿ ಜಿಲ್ಲೆಯಲ್ಲಿ ಮಾನವ ಹಕ್ಕುಗಳ ಆಯೋಗದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಸಾರ್ವಜನಿಕರಲ್ಲಿ ಮೂಢನಂಬಿಕೆ ಹಾಗೂ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸುವುದರಿಂದ ಮಾನವ ಹಕ್ಕುಗಳನ್ನು ರಕ್ಷಣೆ ಮಾಡಿದಂತಾಗುತ್ತದೆ ಎಂದು ಅವರು ಹೇಳಿದರು.

ಬಸ್ ನಿಲ್ದಾಣ, ಜೈಲು, ಪೊಲೀಸ್ ಠಾಣೆ, ವಿದ್ಯಾರ್ಥಿ ನಿಲಯ ಸೇರಿದಂತೆ ಹಲವಾರು ಸಾರ್ವಜನಿಕ ಸ್ಥಳಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಹೆಚ್ಚಾಗಿ ನಡೆಯುತ್ತದೆ. ಅಂತಹ ಸ್ಥಳಗಳಲ್ಲಿ ಅಧಿಕಾರಿಗಳು ಜಾಗೃತಿ ವಹಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ತಂಪು ಪಾನೀಯಗಳನ್ನು ಮಾರಾಟ ಮಾಡುವಂತಹ ಅಂಗಡಿಗಳ ಮೇಲೆ ಜಾಗೃತಿ ವಹಿಸಬೇಕು ಎಂದು ಅವರು ತಿಳಿಸಿದರು.

ಹೊಸದಾಗಿ ಸರ್ಕಾರದಿಂದ ಮಂಜೂರಾಗುವ ಪದವೀಧರ ವಿದ್ಯಾರ್ಥಿನಿಯರ ವಸತಿನಿಲಯಗಳ ಹೊಸ ಕಟ್ಟಡಗಳಲ್ಲಿ ರೂಮ್‌ಗಳಲ್ಲಿ ಅಟ್ಯಾಚ್ ಶೌಚಾಲಯ ಹಾಗೂ ಪ್ರತ್ಯೇಕ ಡ್ರೆಸ್ಸಿಂಗ್ ರೂಮ್‌ಗಳನ್ನು ಮಾಡಬೇಕು. ಕಾರ್ಮಿಕರ ಮಕ್ಕಳಿಗೆ ಅಗತ್ಯವಿರುವ ಅವಶ್ಯಕತೆಗಳನ್ನು ನೀಡಿ, ಮೂಲಭೂತ ಸೌಕರ್ಯಗಳನ್ನು ದೊರಕುವಂತೆ ಮಾಡಿ ಎಂದು ಅಧಿಕಾರಿಗಳಿಗೆ ಅವರು ಸಲಹೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ದಿವ್ಯ ಪ್ರಭು, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಗೋಪಾಲ ಬ್ಯಾಕೋಡ, ಉಪ ಪೊಲೀಸ್ ಆಯುಕ್ತ ಮಹಾನಿಂಗ ನಂದಗಾಂವಿ, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಆಯುಕ್ತ ಡಾ. ಈಶ್ವರ ಉಳ್ಳಾಗಡ್ಡಿ ಅವರು ಮಾತನಾಡಿದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ಮಕ್ಕಳ ಶೈಕ್ಷಣಿಕ ಗುಣಮಟ್ಟ ಸುಧಾರಣೆ ಅಗತ್ಯ



**ನವಲಗುಂದ :** ಶಾಲಾ ಮೂಲ ಸೌಕರ್ಯ ಹೆಚ್ಚಿಸುವುದು, ಅನಿಯಮಿತ ಗೈರು ಹಾಜರಿ, ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರುವ ಪ್ರಯತ್ನ ಮಾಡುವುದು, ಮಕ್ಕಳ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಎಸ್ ಡಿ ಎಂ ಸಿ ಹಾಗೂ ಶಿಕ್ಷಕರ, ಪಾಲಕರ ಜವಾಬ್ದಾರಿ ಮಹತ್ವದ್ದಾಗಿದೆ ಎಂದು ನೂತನ ಎಸ್ ಡಿ ಎಂ ಸಿ ಅಧ್ಯಕ್ಷ ಉಮೇಶ ನವಲಗುಂದ ಹೇಳಿದರು.

ತಾಲ್ಲೂಕಿನ ಪಡೆಸೂರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಎಸ್,ಡಿ,ಎಂಸಿ ಪದಾಧಿಕಾರಿಗಳ ಆಯ್ಕೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಭಿವೃದ್ಧಿಗೆ ಶಿಕ್ಷಣ ಮುಖ್ಯ ಎಂಬುದನ್ನು ಅರಿತು ಕೆಲಸ ಮಾಡಬೇಕು. ನಮ್ಮ ಶಾಲೆಗೆ ಮುಂದಿನ ದಿನಗಳಲ್ಲಿ ಎಲ್ಲಾ ಕೆಲಸಗಳಿಗೆ ಒತ್ತು ಕೊಡುತ್ತೇವೆ ಹಾಗೂ ಶಾಲೆಯನ್ನು ಅಭಿವೃದ್ಧಿ ಪಡಿಸಲು ಎಲ್ಲರೂ ಸೇರಿ ಶ್ರಮಿಸೋಣ ಎಂದರು.

ಮುಖ್ಯ ಶಿಕ್ಷಕ ಎಸ್ ಎಂ ಮೆಣಸಿನಕಾಯಿ ಮಾತನಾಡಿ ಶಾಲಾಭಿವೃದ್ಧಿ ಮತ್ತು ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಶಾಲಾ ಮೇಲುಸ್ತುವಾರಿ ಸಮಿತಿಯ ಪಾತ್ರ ಮಹತ್ವದ್ದು ಹಾಗಾಗಿ ಶಾಲೆಯ ಶೈಕ್ಷಣಿಕ ಹಾಗೂ ಭೌತಿಕ ಸೌಲಭ್ಯಗಳ ಅಭಿವೃದ್ಧಿಗೆ ತಮ್ಮ ಸೇವೆಯು ಮುಡಿಪಾಗಿರಲೆಂದು ಮನವಿ ಮಾಡಿದರು.

ಉಪಾಧ್ಯಕ್ಷೆ ಕವಿತಾ ತಳವಾರ ಸದಸ್ಯರಾದ ಹನಮಪ್ಪ ತೋಟದ, ಮಹಾದೇವಪ್ಪ ಸವದಿ, ವಿರುಪಾಕ್ಷಪ್ಪ ಅಂಗಡಿ, ಹುಲಗಪ್ಪ ಹುಣಸಿಕಾಯಿ, ಶಿವಪ್ರಕಾಶ ಹಿರೇಮಠ, ವಿಠ್ಠಲ ಕೊಳ್ಳನ್ನವರ, ಶಂಕ್ರಪ್ಪ ಮುಂದಿನಮನಿ, ಅಪೂರಸಾಬ ಮುಲ್ಲಾನವರ, ಹೇಮಲತಾ ತೋಟದ, ರತ್ನಾ ಬಂಕುಣಕಿ, ಗೀತಾ ಬೆಟಗೇರಿ, ಗಂಗವ್ವ ಸುಳ್ಳದ, ಕಲ್ಪನಾ ತಿರ್ಲಾಪೂರ, ರುಕ್ಮೀಣಿ ಬರಗುಂಡಿ, ಮಂಜುಳಾ ಕೆಳಗಿನಮನಿ, ಲಕ್ಷ್ಮವ್ವ ಚಲವಾದಿ ಸೇರಿದಂತೆ ಗ್ರಾಮ ಪಂಚಾಯತಿ ಸದಸ್ಯರು ಉಪಸ್ಥಿತರಿದ್ದರು.

# ಪತ್ರಿಕಾ ದಿನಾಚರಣೆ ಕಾರ್ಯಕ್ರಮ



**ಕಲಘಟಗಿ :** ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿ ಪತ್ರಿಕಾ ರಂಗ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದು ಡಾ.ಸಿ ಎಚ್ ವಿಎಸ್‌ವಿ ಪ್ರಸಾದ ಹೇಳಿದರು.

ತಾಲೂಕಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಪಟ್ಟಣದ ಗುಡ್ ನ್ಯೂಸ್ ಕಾಲೇಜಿನಲ್ಲಿ ಹಮ್ಮಿಕೊಂಡ ಪತ್ರಿಕಾ ದಿನಾಚಾರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕವಿವಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕ ಜೆ. ಎಂ. ಚಂದುನವರ ಮಾತನಾಡಿ, ಈ ಜಗತ್ತಿನ ಮೊದಲ ಪತ್ರಕರ್ತ ಅಂದರೆ ನಾರದ ಮುನಿಗಳು. ಅಂದಿನಿಂದಲೇ ಈ ಪತ್ರಿಕಾ ವೃತ್ತಿ ಆರಂಭಗೊಂಡಿದೆ. ಸ್ಥಳೀಯ ಸುದ್ದಿಗಳನ್ನು ಬಿತ್ತರಿಸಿ ನ್ಯಾಯ ಒದಗಿಸಿ ಕೊಡುವಲ್ಲಿ ಪತ್ರಕರ್ತರ ಪಾತ್ರ ಹಿರಿದಾಗಿದೆ. ಕೇವಲ ಸುದ್ದಿಗಳನ್ನು ಬಿತ್ತರಿಸುವುದಷ್ಟೇ ಅಲ್ಲದೆ,

ತಪ್ಪನ್ನು ಎತ್ತಿ ತೋರಿಸುವುದು ಮತ್ತು ಒಳ್ಳೆಯದನ್ನು ಪ್ರಚಾರಿಸುವ ಕಾಯಕವೇ ಪತ್ರಿಕಾ ವೃತ್ತಿ ಎಂದು ಹೇಳಿದರು.

ಸಮಾರಂಭ ಅಧ್ಯಕ್ಷತೆಯನ್ನು ಕಲ್ಲಪ್ಪಾ ಮಿರ್ಜಿ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಶಸ್ತಿ ಪುರಸ್ಕೃತ ಪ್ರಹ್ಲಾದ ಗೌಡ, ಈರಪ್ಪ ನಾಯಕರ್ ಹಾಗೂ ತಾಲೂಕಿನ ಪತ್ರಿಕಾ ವಿತರಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯ ಮೇಲೆ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾದ ಲೊಚನೇಶ ಹೂಗರ, ಕಾರ್ಯದರ್ಶಿಗಳಾದ ಸುಶಿಲೆಂದ್ರಾಚಾರ್ಯ ಕುಂದರಗಿ, ರೆ ಬ ವರ್ಗಿಸ್ ಕೆ ಜೆ., ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಂಜುನಾಥ ಮುರಳ್ಳಿ, ಸೊಮನ್ನಾ ಬೆನ್ನೂರ, ಅಣ್ಣಪ್ಪಾ ಒಲೆಕಾರ, ಪರಮಾನಂದ ಒಡೆಯರ್, ಆರ್. ಎಮ್. ಹೊಲ್ತಿಕೊಟಿ, ಪತ್ರಕರ್ತರಾದ ಪ್ರಕಾಶ ಲಮಾಣಿ, ರಾಕೆಶ ಅಳಗವಾಡಿ, ವಿರೇಶ್ ಹಾರುಗೇರಿ, ಗಿರಿಶ್ ಮುಕ್ಕಲ್, ರವಿ ಬಡಿಗೇರ, ರಮೆಶ್ ಸೊಲಾರಗೊಪ್ಪ, ಉಮೆಶ್ ಜೊಶಿ, ಪ್ರಹ್ಲಾದ ಗೊಲ್ಲಗೊಡ್ರ, ಪ್ರಕಾಶ ದುಪದ, ಉದಯ, ಪ್ರಭಾಕರ ನಾಯಕ, ಸುಭಾಷ್ ಸುಣಗಾರ, ವಿನಾಯಕ ಭಟ್ಟ, ಶಶಿಕುಮಾರ ಕಟ್ಟಿಮನಿ ಮತ್ತಿತರರು ಉಪಸ್ಥಿತರಿದ್ದರು.

# ಲೋಕಾಯುಕ್ತ ನ್ಯಾಯಮೂರ್ತಿಗಳಿಂದ ವಿವಿಧ ಕಾಮಗಾರಿಗಳ ವಿಕ್ಷಣೆ



**ತಾಳಿಕೋಟೆ :** ಕರ್ನಾಟಕ ಲೋಕಾಯುಕ್ತ ನ್ಯಾಯಮೂರ್ತಿಗಳಾದಬಿ.ಎಸ್.ಪಾಟೀಲ(ಪಡೇಕನೂರ) ಅವರು ಶುಕ್ರವಾರರಂದು ಮಡಿಕೇಶ್ವರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬೆಟ್ಟಿ ನೀಡಿ ಆಸ್ಪತ್ರೆಯ ಕಾರ್ಯವೈಖರ್ಯಗಳ ಬಗ್ಗೆ ಪರಿಶೀಲನೆ ನಡೆಸಿದರಲ್ಲದೇ ನಂತರ ಪಡೇಕನೂರ ಕೇ-ರೆಗೆ ನೀರು ಬಿಡುವ ಕಾಲುವೆ ಕೂಡಿಸಲಾದ ಗೇಟ್‌ನ್ನು ಪರಿಶೀಲನೆ ನಡೆಸಿದರು.

ಮಡಿಕೇಶ್ವರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬೆಟ್ಟಿ ನೀಡಿದ ಲೋ.ನ್ಯಾ.ಬಿ.ಎಸ್.ಪಾಟೀಲ (ಪಡೇಕನೂರ) ಅವರು ತಾಲೂಕಾ ಆಡಳಿತ ವೈಧ್ಯಾಧಿಕಾರಿ ಡಾ.ಸತೀಶ ತಿವಾರಿ ಅವರಿಂದ ಆಸ್ಪತ್ರೆಯಲ್ಲಿ ಸಿಗುವ ಸೌಲಭ್ಯಗಳ ಕುರಿತು ಮಾಹಿತಿ ಪಡೆದುಕೊಂಡರಲ್ಲದೇ ಸುತ್ತಲಿನ ಗ್ರಾಮಗಳಿಂದ ಮಡಿಕೇಶ್ವರ ಪ್ರಾಥಮಿಕ ಆರೋಗ್ಯ ಕೇಂದ್ರ ಒಳ್ಳೆಯ ಸೇವೆಯನ್ನು ನೀಡಬೇಕು ಈ ನಿಟ್ಟಿನಲ್ಲಿ ವೈಧ್ಯರು ಸಿಬ್ಬಂದಿಗಳು ಕಾರ್ಯನಿರ್ವಹಿಸಬೇಕು ಆಸ್ಪತ್ರೆಯಲ್ಲಿ ಸ್ವಚ್ಚತೆಗೆ ಮೊದಲು ಆಧ್ಯತೆ ನೀಡಿ ಎಂದ ಅವರು ರೋಗಿಗಳಿಗೆ ಒಳ್ಳೆಯ ಸೇವೆ ಒದಗಿಸುವ ಕಡೆಗೆ ಎಲ್ಲರೂ ಮುಂದಾಗುವಂತೆ ನೋಡಿಕೊಳ್ಳಿ ಯಾವುದೇ ಮೂನ್ಸೂಚನೆ ನೀಡದೇ ಜಿಲ್ಲೆಯ ಎಲ್ಲ ಆರೋಗ್ಯ ಕೇಂದ್ರಗಳಿಗೆ ವಿಜಿಟ್ ಮಾಡಲು ಡಿಎಚ್‌ಓ ಅವರಿಗೆ ಸೂಚಿಸಿದ್ದೇನೆ ಏನೇ ಲೋಪ ಕಂಡುಬಂದರೂ ನಿರ್ಧಾರಕ್ಷೀಣ ಕ್ರಮ ಕೈಗೊಳ್ಳಲು ಸೂಚಿಸಿದ್ದೇನೆ ನಾನು ಕೂಡಾ ಯಾವ ಸಮಯದಲ್ಲಿ ಯಾವ ಆರೋಗ್ಯ ಕೇಂದ್ರ-ಕ್ಕೆ ಬೆಟ್ಟಿ ನೀಡುತ್ತೇನೆ ಗೊತ್ತಿಲ್ಲಾ ಅಷ್ಟೂರಳಗೆ ಎಲ್ಲ ಆರೋಗ್ಯ ಕೇಂದ್ರಗಳು ಸುದಾರಿಸುವಂತಹ ಕೆಲಸ ಮಾಡಲು ಅಧಿಕಾರಿ ಡಾ.ಸತೀಶ ತಿವಾರಿ ಅವರಿಗೆ ಸೂಚಿಸಿದರು.


ನಂತರ ಪಡೇಕನೂರ ಗ್ರಾಮದ ಕೇರೆಗೆ ಕಾಲುವೆಯಿಂದ ನೀರು ಸಂಪರ್ಕ ಕಲ್ಪಿಸುವ ಕಾಲೇವೆಗೆ ಅಳವಡಿಸಲಾದ ಗೇಟ್ ಕಾಮಗಾರಿಯನ್ನುವಿಕ್ಷಣೆಮಾಡಿದ ಲೋಕಾಯುಕ್ತ ನ್ಯಾಯಮೂರ್ತಿ ಪಾಟೀಲರು ಕೆಬಿಜೆಎನ್‌ಎಲ್ ಮುಖ್ಯ ಇಂಜನಿಯರ್ ಶ್ರೀನಿವಾಸ ಅವರಿಂದ ಮಾಹಿತಿ ಪಡೆದರಲ್ಲದೇ ಪಡೇಕನೂರಿಂದ ಡವಳಗಿ ಒಳಗೊಂಡು ಕೆಲವು ಗ್ರಾಮಗಳಿಗೆ ರಸ್ತೆನಿರ್ಮಿಸುವ ಕುರಿತು ಸೂಚಿಸಿದರಲ್ಲದೇ ನಂತರ ಪಡೇಕನೂರ ಗ್ರಾಮದ ಕಲುಷಿತ ನೀರು ಕೇರೆಗೆ ಸೇಕರಣೆಗೊಳ್ಳದ ಹಾಗೆ ಪಡೇಕನೂರ ಗ್ರಾಮದ ಚರಂಡಿ ನೀರು ಕೆರೆಗೆ ಹೊಗದಂತೆ ತಡೆಯಲು ಬೂದು ನೀರು ನಿರ್ವಹಣಾ ಘಟಕದ ವಿಸ್ತೃತ ಯೋಜನಾ ವರದಿಯ ಮಾಹಿತಿಯನ್ನು ಪಡೆದು ಬೂದು ನೀರು ನೇರವಾಗಿ ಕೆ-ರೆಗ ಸೇರದಂತೆ ಕಾಮಗಾರಿ ಕೈಗೊಳ್ಳಲು ಸೂಚಿಸಿದರಲ್ಲದೇ ಡ್ರೇನ್ ನಿರ್ಮಿಸಿ ಕಲುಷಿತವೆಲ್ಲವೂ ಇಲ್ಲಿಯೇ ಉಳಿಯಬೇಕು ನೀರು ಮಾತ್ರ ಹೋಗಬೇಕು ಮತ್ತು ಗ್ರಾಮದಲ್ಲಿ ನೀರಿನ ತೊಟ್ಟೆ ನಿರ್ಮಿಸಿ ದನಕರುಗಳಿಗೆ ಅನುಕೂಲವಾಗುವಂತೆ ಮಾಡಿ ಧೋಬಿ ಘಾಟ ನಿರ್ಮಿಸಿ ಬಟ್ಟೆ ಬರೆ ತೊಳೆಯಲು ಅನುಕೂಲ ಮಾಡಿಕೊಡಿ ಎಂದ ಅವರು ಗ್ರಾಮದ ಸ್ವಚ್ಚತೆ ಮತ್ತು ನೈರ್ಮಲ್ಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ, ವ್ಯಯಕ್ತಿಕ ಮತ್ತು ಸಮುದಯ ಶೌಚಾಲಯ ಬಳಸಲು ಜನರಿಗೆ ತಿಳಿ ಹೇಳಿ ಬಯಲು ಮಲವಿಸರ್ಜನೆ ಮಾಡುವದನ್ನು ತಡಯಬೇಕು ಎಂದು ಜಿಪಂ ಉಪ ಕಾರ್ಯದರ್ಶಿ ವಿಜಯಕುಮಾರ ಅಜೂರ ಅವರಿಗೆ ತಾ.ಪಂ ಇಓ ವೆಂಕಟೇಶ ವಂದಾಲ ಅವರಿಗೆ ಮತ್ತು ಪಿಡಿಓ ಶ್ರೀಮತಿ ಸಾವಿತ್ರಿ ಬಿರಾದಾರ ರವರಿಗೆ ಸೂಚಿಸಿದರು.ಸಣ್ಣ ನೀರಾವರಿ ಇಲಾಖಾ ಅಧಿಕಾರಿಗಳಿಗೆ ಕೆ-ರೆಯ ನಿರ್ವಹಣೆ ಮತ್ತು ನೀರು ಸರಬರಾಜು ಮಾಡಲು ಆದ್ಯತೆ ಮೇರೆಗೆ ಕೆಲಸ ನಿರ್ವಹಿಸಲು ಸೂಚಿಸಿದರು.

**ನನ್ನೂರಿನ ಜನ ಸ್ವಚ್ಚತೆಗೆ ಆದ್ಯತೆ ನೀಡಿ :** ನನ್ನ ಹುಟ್ಟೂರಿನ ಪಡೇಕನೂರ ಗ್ರಾಮದ ಜನರು ಸ್ವಚ್ಚತೆ ಆದ್ಯತೆ ನೀಡಲು ಮುಂದಾಗಬೇಕು ಕೇರೆಯ ಕಡೆಗೆ ಹರಿದು ಹೋಗುವ ನೀರನ್ನು ಕಲುಷಿತಗೊಳಿಸುವಂತಹ ಕಾರ್ಯ ಮಾಡಬಾರದು ಯಾ-ಕೆಂದರೆ ಕಲುಷಿತ ನೀರು ಕೆರೆ ಮತ್ತು ಭಾವಿಯಲ್ಲಿ ಸೇರಿದರೆ ಡೆಂಗ್ಯೂ ಇನ್ನಿತರ ರೋಗಗಳು ಬರುತ್ತವೆ ಆ ಸಮಯದಲ್ಲಿ ನರಳಾಡುವದು ಬೇಡ ಸ್ವಚ್ಚತೆಗೆ ಮಹತ್ವ ನೀಡಿ ಕೆರೆಯಲ್ಲಿ ಈಜಾಡಲು ಹೋಗಲು ಮಕ್ಕಳು ಹೋಗದಂತೆ ತಿಳುವಳಿಕೆ ನೀಡಿ ಮನೆ ಮನೆಗೆ ಶೌಚಾಲಯಗಳಿವೆ ಆದರೂ ಹೊರಗಡೆ ಬಹಿರ್ದೆಸೆಗೆ ಹೋಗುವದ ಅಬ್ಯಾಸವಾಗಿದೆ ಅದನ್ನು ತಪ್ಪಿಸಿ ಎಲ್ಲರೂ ಶೌಚಾಲಯಗಳನ್ನು ಉಪಯೋಗಿಸಬೇಕು ಇದ-ರಿಂದ ಗ್ರಾಮದಲ್ಲಿ ಯಾರಿಗೂ ರೋಗ ರುಜುಗಳು ಬರುವದಿಲ್ಲಾ ಅರ್ದದಷ್ಟು ಜನರು ದುಡಿದ ಹಣದಲ್ಲಿ ಅರ್ದದಷ್ಟು ಆಸ್ಪತ್ರೆಗೆ ಇಡುತ್ತಾರೆ ಅದನ್ನು ತಪ್ಪಿಸಿ ಮೊದಲು ಮನೆಯ ಮುಂದೆ ಸ್ವಚ್ಚತೆ ಕಾಪಾಡಿ ನಂತರ ಊರನ್ನು ಸ್ವಚ್ಚವಾಗಿ ಇಡುವದರ ಕಡೆಗೆ ಗಮನಕೊಡಿ ಇದರಿಂದ ಸುಂದರ ಗ್ರಾಮವಾಗಲು ಸಾದ್ಯವಾಗಲಿದೆ ಎಂದರು.

ನಂತರ ಪಡೇಕನೂರ ಗ್ರಾಮದಲ್ಲಿ ಪಿ.ಆರ್.ಇ.ಡಿ ಇಲಾಖೆಯಡಿ ನಿರ್ಮಾಣವಾದ ಅಂಗನವಾಡಿ ಕಟ್ಟಡವನ್ನು ವಿಕ್ಷೀಸಿ ಪರಿಶೀಲಸಿ ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೇ ಚಿಕ್ಕ ಮಕ್ಕಳಿಗೆ ಚಿತ್ರಗಳ ಮೂಲಕವೇ ಶಿಕ್ಷಣದ ಹೆಜ್ಜೆ ಪ್ರಾರಂಬಿಸಲು ಮುಂದಾಗಿರುವ ಕುರಿತು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ವಿಜಯಪುರ ಲೋಕಾಯುಕ್ತ ಅಧಿಕ್ಷಕ ಟಿ.ಮಲ್ಲೇಶ್, ಡಿವಾಯ್‌ಎಸ್‌ಪಿ ಸುರೇಶ ರೆಡ್ಡಿ, ಕೆಬಿಜೆಎನ್‌ಎಲ್ ಸಹಾಯಕ ಇಂಜನಿಯರ್ ವಿಶ್ವನಾಥ ಬಿರಾದಾರ, ಜಿಲ್ಲಾ ಪಂಚಾಯತಉಪಕಾರ್ಯದರ್ಶಿ ವಿಜಯಕುಮಾರ ಅಜೂರ, ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ಸಿ.ಬಿ.ದೇವರಮನಿ, ಪಿ.ಆರ್.ಡಿ.ಎ ಇಲಾಖೆಯ ಡಬ್ಲ್ಯೂ.ಇ. ನಬಿಲಾಲ್, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ವೆಂಕಟೇಶ ವಂದಾಲ, ತಾ.ಪಂ ಪಂಚಾಯತ ರಾಜ್ ಸಹಾಯಕ ನಿರ್ದೇಶಕ ಬಿ.ಎಮ್.ಸಾಗರ, ಪಿಡಿಓ ಶ್ರೀಮತಿ ಸಾವಿತ್ರಿ ಬಿರಾದಾರ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಮತ್ತು ತಾಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಶರಣರ ತತ್ವಾದರ್ಶಗಳನ್ನು ನಿಜ ಜೀವನದಲ್ಲಿ ಅಳವಡಿಸಿಕೊಳ್ಳಿ: ಎಂಎಲ್ಸಿ ಸುನೀಲಗೌಡ ಪಾಟೀಲ



**ವಿಜಯಪುರ :** ಶರಣರ ತತ್ವಾದರ್ಶಗಳನ್ನು ನಿಜ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ಶುಕ್ರವಾರ ಬಬಲೇಶ್ವರ ತಾಲೂಕಿನ ಕೊಡಬಾಗಿ ಗ್ರಾಮದಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ನಿರ್ಮಿಸಲಾಗಿರುವ ಅಕ್ಕಮಹಾದೇವಿ ಗುಡಿ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ಅಕ್ಕಮಹಾದೇವಿ ನಮಗೆಲ್ಲರಿಗೂ ತಮ್ಮ ಆಚಾರ, ವಿಚಾರ, ವಚನಗಳ ಮೂಲಕ ಮಾದರಿಯಾಗಿದ್ದಾರೆ. ಶರಣ, ಶರಣೆ-ಯರ ದೇವಸ್ಥಾನ ನಿರ್ಮಿಸುವುದರ ಜೊತೆಗೆ ಅವರ ತತ್ವಾದರ್ಶಗಳನ್ನು ನಿಜ ಜೀವನದಲ್ಲಿ ಅಳವಡಿಸಿಕೊಂಡರೆ ಬಾಳು ಹಸನಾಗುತ್ತದೆ. ಶ್ರಾವಣ ಮಾಸ ಪ್ರಾರಂಭವಾದಾಗ ಕೆಲವರು ತಮ್ಮ ಆಚಾರ, ವಿಚಾರಗಳನ್ನು ಬದಲಾಯಿಸಿಕೊಳ್ಳುತ್ತಾರೆ. ಈ ನಡವಳಿಕೆ ಕೇವಲ ಶ್ರಾವಣ ಮಾಸಕ್ಕೆ ಸೀಮಿತವಾಗದೇ, ಜೀವನದುದ್ದಕ್ಕೂ ಪಾಲಿಸುವ ಮೂಲಕ ಶರಣರ ಆಶಯದಂತೆ ಜೀವನ ಸಾಗಿಸಬೇಕು ಎಂದು ಅವರುಹೇಳಿದರು.

ಇದಕ್ಕೂ ಮೊದಲು ಮದಗುಣಕಿ ಗ್ರಾಮದಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಕೈಗೊಳ್ಳಲಾಗಿರುವರೂ.25ಲಕ್ಷವೆಚ್ಚದಸಿಸಿರಸ್ತೆಗೆ ಭೂಮಿಪೂಜೆ, ಪಿ.ಆರ್.ಇಡಿ ವತಿಯಿಂದರೂ. 20 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿರುವ ಅಂಗನವಾಡಿ ಕಟ್ಟಡ ಉದ್ಘಾಟಿಸಿದ ಅವರು, ಅಂಗನವಾಡಿ ಸಿಬ್ಬಂದಿ ಮತ್ತು ಅಧಿಕಾರಿಗಳು ಮಕ್ಕಳ ಶಿಕ್ಷಣದ ಜೊತೆಗೆ ಹಿತ ರಕ್ಷಣೆಗೆ ಆದ್ಯತೆ ನೀಡಬೇಕು. ಗುಣಮಟ್ಟದ ಆಹಾರ ಪೂರೈಕೆ ಮತ್ತು ಶುಚಿತ್ವದ ಕಡೆಗೆ ಗಮನ ನೀಡಬೇಕು. ಅಲ್ಲದೇ, ಮಕ್ಕಳ ರಕ್ಷಣೆಗೆ ಬೇಕಾಗಿರುವ ಅಗತ್ಯ ಮುಂಜಾಗೃತೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.

ಈಸಂದರ್ಭದಲ್ಲಿಹಿರೇಮಠದಶ್ರೀಮಹಾದೇವ ಸ್ವಾಮಿಗಳು ಹಿರೇಮಠ, ಮಮದಾಪುರ ವಿರಕ್ತಮಠದ ಶ್ರೀ ಅಭಿನವ ಮುರಗೇಂದ್ರ ಸ್ವಾಮಿಗಳು, ಗಿರಿಸಾಗರಕಲ್ಯಾಣ ಹಿರೇಮಠದ ಶ್ರೀ ರುದ್ರಮುನಿ ಶಿವಾಚಾರ್ಯರು, ಕರ್ನಾಟಕ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ್ವರ ಬಬಲೇಶ್ವರ, ಮುಖಂಡರಾದ ಈರಗೊಂಡ ಬಿರಾದಾರ, ಬಸವರಾಜ ದೇಸಾಯಿ, ಮುತ್ತಪ್ಪ ಶಿವಣ್ಣವರ, ಅಪ್ಪುಗೌಡ ಪಾಟೀಲ ಶೇಗುಣಸಿ, ಕಿಟ್ಟು ಕುಲಕರ್ಣಿ, ಕವಿತಾ ಮಠಪತಿ, ಮಲ್ಲಿಕಾರ್ಜುನ ಗಂಗೂರ, ಶಿವನಗೌಡ ಬಿರಾದಾರ, ಬಸಪ್ಪ ಭಾವಿಕಟ್ಟಿ, ಸಂಗಮೇಶ ಬಿರಾದಾರ, ಬಿ.ಬಿ. ಪಾಟೀಲ ಶೇಗುಣಸಿ, ಡಾ. ಕೌಸರತ್ತಾರ, ಶಂಕ್ರೆಪ್ಪ ಬಿರಾದಾರ ಹೊಸೂರ, ಎಚ್.ಬಿ. ಹರನಟ್ಟಿ, ಜಿ.ಬಿ. ಹರನಟ್ಟಿ, ಅಧಿಕಾರಿಗಳಾದ ಕೆ.ಕೆ. ಚವ್ಹಾಣ, ಅನೀಲ ಹಳ್ಳಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಶ್ರೀ ನುಲಿಯ ಚಂದಯ್ಯ, ಬ್ರಹ್ಮಶ್ರೀ ನಾರಾಯಣಗುರು ಹಾಗೂ ಶ್ರೀ ಕೃಷ್ಣ ಜಯಂತಿ ಅರ್ಥಪೂರ್ಣ ಆಚರಣೆಗೆ ನಿರ್ಧಾರ



**ವಿಜಯಪುರ:**ಜಿಲ್ಲಾಡಳಿತಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಗಸ್ಟ್ 19 ರಂದು ಶ್ರೀ ನುಲಿಯ ಚಂದಯ್ಯ ಜಯಂತಿ, ಆ.20ರಂದುಬ್ರಹ್ಮಶ್ರೀನಾರಾಯ-ಣಗುರುಜಯಂತಿಮತ್ತುಆಗಸ್ಟ್26 ರಂದು ಶ್ರೀ ಕೃಷ್ಣ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶುಕ್ರವಾರ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈನಿರ್ಣಯಕ್ಕೆಕೈಗೊಳ್ಳಲಾಯಿತು.

ಆಗಸ್ಟ್ 19 ರಂದು ನುಲಿಯ ಚಂದಯ್ಯ ಜಯಂತಿ ಆಚರಣೆ ಅಂಗವಾಗಿಅಂದುಬೆಳಿಗ್ಗೆ9ಗಂಟೆಗೆ ಶ್ರೀ ಸಿದ್ಧೇಶ್ವರ ದೇವಸ್ಥಾನದಿಂದ ಶ್ರೀ ಕಂದಗಲ್ ಹನುಮಂತರಾಯ ರಂಗಮಂದಿರದವರೆಗೆಶ್ರೀನುಲಿಯ ಚಂದಯ್ಯ ಭಾವಚಿತ್ರ ಮೆರವಣಿಗೆ ಹಾಗೂ 10-30ಕ್ಕೆ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು.

**ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ :** ಆ.20ರಂದು ಸಂಜೆ 4 ಗಂಟೆಗೆ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಬ್ರಹ್ಮಶ್ರೀ ನಾರಾಯಣಗುರು ಭಾವಚಿತ್ರ ಮೆರವಣಿಗೆಹಾಗೂಸಂಜೆ5ಗಂಟೆಗೆ ಕಂದಗಲ್ ಶ್ರೀ ಹನುಮಂತರಾಯ ರಂಗ ಮಂದಿರದಲ್ಲಿ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು.

**ಶ್ರೀಕೃಷ್ಣಜಯಂತಿ:**ಆಗಸ್ಟ್26ರಂದು ಶ್ರೀ ಕೃಷ್ಣ ಜಯಂತಿ ಅಂಗವಾಗಿ ಬೆಳಗ್ಗೆ 9:30ಗಂಟೆಗೆ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಮೆರವಣಿಗೆಹಾಗೂ10:30ಗಂಟೆಗೆ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು.

ಈ ಮಹನೀಯರ ಜಯಂತಿ ಕಾರ್ಯಕ್ರಮದ ಅಂಗವಾಗಿ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ, ವಿವಿಧ ಗಣ್ಯರಿಗೆ ಆಹ್ವಾನ, ಮೆರವಣಿಗೆ, ಕಲಾ ತಂಡಗಳ ವ್ಯವಸ್ಥೆ, ಮಹನೀಯರ ಆದರ್ಶ ವಿಚಾರಗಳ ಕುರಿತಾಗಿ ಉಪನ್ಯಾಸ, ದೀಪಾಲಂಕಾರ ಸೇರಿದಂತೆ ವೇದಿಕೆ ಕಾರ್ಯಕ್ರಮದ ಸಿದ್ಧತೆ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆಸೂಚಿಸಲಾಯಿತು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಸಹಾಯಕನಿರ್ದೇಶಕ ಸಂತೋಷಭೋವಿ,ವಿವಿಧಸಂಘ ಸಂಸ್ಥೆಗಳ ಪದಾಧಿಕಾರಿಗಳಾದ ಅಡಿವೆಪ್ಪ ಸಾಲಗಲ್, ಶ್ರೀನಿವಾಸ ಬೆಟಿಗೇರಿ,ಕೆ.ಎಚ್.ಭಜಂತ್ರಿ,ಗುರು ಕನ್ನೂರ,ಭೀಮರಾಯಜಿಗಜಿಣಗಿ, ಸೋಮನಗೌಡ ಕಲ್ಲೂರ, ಗಿರೀಶ ಕುಲಕರ್ಣಿ, ವಿದ್ಯಾವತಿ ಅಂಕಲಗಿ, ದೇವೇಂದ್ರ ಮೀರೆಕರ್, ಸದಾಶಿವ, ಬಸವರಾಜ, ನರಸಪ್ಪ ಭಜಂತ್ರಿ, ಪ್ರಭಾಕರ ಈಳಗೇರ, ಎಂ.ಜಿ. ಯಂಕಂಚಿ, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಸಂಘಸಂಸ್ಥೆಗಳಪದಾಧಿಕಾರಿಗಳು ಉಪಸ್ಥಿತರಿದ್ದರು.

## ನೀಲಕಂಠೇಶ್ವರ ಶಿಕ್ಷಣ ಸಂಸ್ಥೆಗೆ 35 ಲಕ್ಷ ಅನುದಾನ
# ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಅಗತ್ಯ: ಸವದಿ



**ತೇರದಾಳ :** ಇಂದಿನ ತಂತ್ರಜ್ಞಾನ ಯುಗದಲ್ಲಿ ಜಾಗತಿಕ ಮಟ್ಟದಲ್ಲಿಯೂ ಶಿಕ್ಷಣ ತನ್ನದೆಯಾದ ಮಹತ್ವ ಸಾರುತ್ತಿದೆ. ಆ ದಿಸೆಯಲ್ಲಿ ನಮ್ಮಲ್ಲಿನ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಮಕ್ಕಳ ಉಜ್ವಲ ಭವಿಷ್ಯಕ್ಕೆ ನಾಂದಿ ಹಾಡಬೇಕೆಂದು ಶಾಸಕ ಸಿದ್ದು ಸವದಿ ಹೇಳಿದರು.

ಇಲ್ಲಿನ ಕುರುಹಿನಶೆಟ್ಟಿ ನೀಲಕಂಠೇಶ್ವರ ಶಿಕ್ಷಣ ಸಂಸ್ಥೆಗೆ ವಿಧಾನ ಪರಿಷತ್ ಸದಸ್ಯ ಕೇಶವ ಪ್ರಸಾದ ಎಸ್. 2022-23ನೇ ಸಾಲಿನ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ನೀಡಿದ 20 ಲಕ್ಷ ಹಾಗೂ ರಾಜ್ಯ ಸಭಾ ಸದಸ್ಯ ನಾರಾಯಣ ಕೊರಗಪ್ಪ 2021-22ನೇ ಸಾಲಿನ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ನೀಡಿದ 15 ಲಕ್ಷ ಅನುದಾನದಲ್ಲಿ ಕೈಗೊಂಡ ಶಾಲಾ ಕೊಠಡಿಗಳ ನಿರ್ಮಾಣ, ಬೆಂಚ್. ಕಂಪ್ಯೂಟರ್ ಹಾಗೂ ಇತರೆ ಸಾಮಗ್ರಿಗಳ ಪೂರೈಕೆಯ ಪೂಜಾ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು.

ರಾಜ್ಯದಲ್ಲಿ ಶೈಕ್ಷಣಿಕ ಕ್ಷೇತ್ರಕ್ಕೆ ಮಠಾಧೀಶರ ಕೊಡುಗೆ ಸಾಕಷ್ಟು ಇದೆ. ಆ ನಿಟ್ಟಿನಲ್ಲಿ ಕುರುಹಿನಶೆಟ್ಟಿ ಸಮಾಜದ ಜಗದ್ಗುರುಗಳಾದ ಶಿವಶಂಕರ ಶಿವಾಚಾರ್ಯರ ಸೇವೆ ಶ್ಲಾಘನೀಯ ಎಂದು ಬಣ್ಣಿಸಿದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಹಾಗೂ ಕುರುಹಿನಶೆಟ್ಟಿ ಸಮಾಜದ ಜಗದ್ಗುರು ಶಿವಶಂಕರ ಶಿವಾಚಾರ್ಯ, ಮನುಷ್ಯನಾದವನಿಗೆ ಸೇವಾ ಮನೋಭಾವ ಬಹಳಷ್ಟು ಮುಖ್ಯ. ಹಾಗೆ ಸೇವೆ ಮಾಡಿದರ ಕಾರ್ಯವನ್ನು ಸದ್ಬಳಿಕೆ ಮಾಡಿಕೊಳ್ಳಬೇಕಾಗಿರುವುದು ಅಷ್ಟೇ ಮುಖ್ಯವಾಗಿದೆ. ಸಂಸ್ಥೆ ಮೇಲೆ ಅಪಾರ ನಂಬಿಕೆ ಇಟ್ಟು ಅನುದಾನ ನೀಡಿರುವ ಉಭಯ ಜನಪ್ರತಿನಿಧಿಗಳಿಗೆ ಸಂಸ್ಥೆ ಪರವಾಗಿ ಅಭಿನಂದನೆ ಸಲ್ಲಿಸಿದರು. ಕಾಗವಾಡದ ಯತೀಶ್ವರಾನಂದ ಶ್ರೀ, ನೇಕಾರ ಮುಖಂಡ ಮನೋಹರ ಶಿರೋಳ ಹಾಗೂ ಸಂಸ್ಥೆ ಆಡಳಿತ ಮಂಡಳಿ ನಿರ್ದೇಶಕರು, ಮುಖಂಡರು ಇದ್ದರು.

# ಕೈಮಗ್ಗ ಉದ್ಯಮಕ್ಕೆ ಸರಕಾರಗಳು ಹೆಚ್ಚಿನ ಉತ್ತೇಜನ ನೀಡಬೇಕು

**ರಬಕವಿ-ಬನಹಟ್ಟಿ :** ಭಾರತೀಯರ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿರುವ ಪುರಾತನ ಕೈಗಾರಿಕೆಗಳಲ್ಲೊಂದಾದ ಕೈಮಗ್ಗ ಉದ್ಯಮಕ್ಕೆ ಸರಕಾರಗಳು ಇನ್ನೂ ಹೆಚ್ಚಿನ ಉತ್ತೇಜನ ನೀಡಬೇಕು ಎಂದು ಶಿವಾನಂದ ಕಾಗಿ ಹೇಳಿದರು.

ಬನಹಟ್ಟಿಯಲ್ಲಿ ರಾಷ್ಟ್ರೀಯ ನೇಕಾರ ದಿನಾಚರಣೆ ನಿಮಿತ್ತ ಹಿರಿಯ ನೇಕಾರರಿಗೆ ಸನ್ಮಾನಿಸಿ ಅವರು ಮಾತನಾಡಿದರು. ಸರಕಾರಗಳು ಕೇವಲ ಸವಲತ್ತುಗಳನ್ನು ಆದೇಶ ಮಾಡುತ್ತವೆ. ಆದರೆ ನಿಜವಾದ ನೇಕಾರರಿಗೆ ಸರ್ಕಾರದ ಸವಲತ್ತುಗಳು ಸಿಗುತ್ತಿಲ್ಲ. ಸರಕಾರ ನೇಕಾರರಿಗೆ ಹೆಚ್ಚೆಚ್ಚು ಸವಲತ್ತುಗಳನ್ನು ನೀಡುವ ಮೂಲಕ ಕೈಮಗ್ಗ ಉದ್ಯಮವನ್ನು ಸಂರಕ್ಷಿಸಬೇಕು. ಹಾಗೆಯೇ ಸಹಕಾರ ಕ್ಷೇತ್ರ ಹಾಗೂ ಸಂಘಟಿತ ವಲಯದಲ್ಲಿ ದಯನೀಯ



ಸ್ಥಿತಿಯಲ್ಲಿರುವ ನೇಕಾರರ ಸಮಸ್ಯೆಗಳನ್ನು ಬಗೆಹರಿಸಲು ದುಡಿಯುವ ಬಂಡವಾಳ, ಉತ್ತಮ ತರಬೇತಿ, ಸುಧಾರಿತ ಕೈಮಗ್ಗ, ಮಾರುಕಟ್ಟೆ ವ್ಯವಸ್ಥೆ ಮೂಲ ಸೌಲಭ್ಯ ಒದಗಿಸಿ ಅಗತ್ಯ ಮಾರ್ಗದರ್ಶನ ನೀಡಲು ಮುಂದಾಗಬೇಕು ಎಂದು ಎಂದು ಕಾಗಿ ಹೇಳಿದರು.

ಈ ಸಂದರ್ಭದಲ್ಲಿ ನೇಕಾರ ಮುಖಂಡ ಶಿವಾನಂದ ಬುದ್ನಿ ಮಾತನಾಡಿ, ಅತ್ಯಂತ ದಯನೀಯ ಸ್ಥಿತಿಯಲ್ಲಿ ಬದುಕುತ್ತಿರುವ ಪ್ರಾಚೀನ ಕಾಲದ ನೇಕಾರಿಕೆ ಉದ್ಯಮಕ್ಕೆ ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ದೊರಕುವ ನಿಟ್ಟಿನಲ್ಲಿ ರಾಷ್ಟ್ರೀಯ ಕೈಮಗ್ಗ ನೇಕಾರ ದಿನಾಚರಣೆಯನ್ನಾಗಿ ಆಗಸ್ಟ ಏಳರಂದು ಆಚರಿಸುವ ಕುರಿತು ಪ್ರಧಾನಿ ನರೇಂದ್ರ ಮೋದಿಯವರ ನಿರ್ಧಾರ ನೇಕಾರರ ಮೊಗದಲ್ಲಿ ಸಂತಸ ಮೂಡುವಂತಾಗಿದೆ ಎಂದು ಹೇಳಿದರು.

ಇಡೀ ಆಗಸ್ಟ್ ತಿಂಗಳು ನೇಕಾರ ದಿನಾಚರಣೆಯನ್ನಾಗಿ ಆಚರಿಸಲಿದ್ದೇವೆ. ಪೂರಕವಾಗಿ ನೇಕಾರರಿಗೆ ದೊರಕಬೇಕಾದ ಮೂಲಭೂತ ಸೌಕರ್ಯಗಳ ಜೊತೆಗೆ ವಿಶೇಷ ಮಾರುಕಟ್ಟೆ ನಿರ್ಮಿಸುವ ಮೂಲಕ ನೇಯ್ಗೆ ಮಾಡಿದ ಸ್ವದೇಶಿ ಬಟ್ಟೆಗಳಿಗೆ ಸುಲಭವಾಗಿ ಮಾರುಕಟ್ಟೆ ದೊರಕುವಲ್ಲಿ ಸರ್ಕಾರ ಮುಂದಾಗಬೇಕೆಂದರು.

ನೇಕಾರ ಹಿರಿಯ ಜೀವಿಗಳಾದ ಮಲ್ಲಪ್ಪ ಹೋಳಗಿ, ಆನಂದ ಜಗದಾಳ, ಶಶಿಕಾಂತ ಬಾಣಕಾರ, ಶಾಂತಾಬಾಯಿ ಮುಳೆ, ಈರಪ್ಪ ಬುದ್ನಿಯವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ನಂದು ಗಾಯಕವಾಡ, ಅಶೋಕ ರಾವಳ, ಈರಣ್ಣ ಚಿಂಚಖಂಡಿ, ವಿಜಯ ಬಾಗೇವಾಡಿ, ಗುರು ಶೀಲವಂತ, ಶಿವಾನಂದ ಬುದ್ನಿ, ಈಶ್ವರ ಕಾಡದೇವರ, ಸೇರಿದಂತೆ ಅನೇಕರು ಭಾಗವಹಿಸಿದ್ದರು.



ಸಂಚಾರಕ್ಕೆ ಮುಕ್ತವಾದ ನಂದಗಾಂವ-ಅವರಾದಿ ಸೇತುವೆ.
**ಮಹಾಲಿಂಗಪುರ:** ಘಟಪ್ರಭಾ ನದಿಯ ಪ್ರವಾಹದಿಂದ ಕಳೆದ 20 ದಿನಗಳಿಂದ ಜಲಾವೃತವಾಗಿದ್ದ ಸಮೀಪದ ನಂದಗಾಂವ-ಅವರಾದಿ ಸೇತುವೆಯು ಸಂಚಾರಕ್ಕೆ ಮುಕ್ತವಾಗಿದೆ.

# ಭಾರತೀಯ ಸಂಸ್ಕೃತಿ ಜಗತ್ತಿನಲ್ಲಿಯೇ ಶ್ರೇಷ್ಠವಾದುದು



**ರಬಕವಿ-ಬನಹಟ್ಟಿ :** ಭಾರತೀಯ ಸಂಸ್ಕೃತಿ ವಿಶ್ವದಲ್ಲಿಯೇ ಶ್ರೇಷ್ಠವಾದುದು. ಭಾರತದಂತಹ ಪವಿತ್ರ ದೇಶದಲ್ಲಿ ನಾವು ಹುಟ್ಟಿದ್ದು ಪುಣ್ಯ. ಭಾರತ ವಿಶ್ವದ ದೇವಸ್ಥಾನವಿದ್ದಂತೆ. ಪ್ರವಚನಗಳಲ್ಲಿ ಭಾಗವಹಿಸುವುದರಿಂದ ನಮಗೆ ಜೀವನದಲ್ಲಿ ಚಿಂತನೆ ಮಾಡುವುದರ ಜೊತೆಗೆ ಸರಿಯಾದ ಸನ್ಮಾರ್ಗದಲ್ಲಿ ನಡೆಯಲು ಸಾಧ್ಯವಾಗುತ್ತದೆ. ಜ್ಞಾನ ದಾಸೋಹ ನಿರಂತರವಾಗಿ ನಡೆದುಕೊಂಡು ಬರಬೇಕು ಎಂದು ಗದಗದ ಪ್ರವಚನಕಾರ ದಯಾನಂದ ಸ್ವಾಮೀಜಿ ತಿಳಿಸಿದರು.

ಶನಿವಾರ ಇಲ್ಲಿನ ಸಿದ್ಧರಾಮೇಶ್ವರ ಕಲ್ಯಾಣ ಮಂಟಪದಲ್ಲಿ ಶ್ರಾವಣ ಮಾಸದ ಅಂಗವಾಗಿ ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸ್ಥಳೀಯ ಹಿರೇಮಠದ ಶರಣಬಸವ ಶಿವಾಚಾರ್ಯರು ಮಾತನಾಡಿ, ಇಂದಿನ ದಿನಗಳಲ್ಲಿ ದಿನನಿತ್ಯದ ಜಂಜಡಗಳಿಂದ ಮುಕ್ತಿಯನ್ನು ಪಡೆದುಕೊಳ್ಳಬೇಕಾದರೆ ಆಧ್ಯಾತ್ಮಿಕ ಚಿಂತನೆಗಳಲ್ಲಿ ಭಾಗವಹಿಸಬೇಕು. ಶ್ರಾವಣ ಮಾಸದಲ್ಲಿ ನಾವೆಲ್ಲರೂ ಪ್ರವಚನ, ಪುರಾಣ ಕೇಳುವುದರಿಂದ ನಮ್ಮಲ್ಲಿಯ ಜ್ಞಾನ ಹೆಚ್ಚಾಗುತ್ತದೆ. ಸಂತ, ಮಹಾತ್ಮರ ಚಿಂತನೆಗಳನ್ನು ಕೇಳುವುದರಿಂದ ಮತ್ತು ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಜೀವನವು ಸಾರ್ಥಕವಾಗುತ್ತದೆ ಎಂದರು.

ನಗರದ ಮುಖಂಡ ಶಂಕರ ಜುಂಜಪ್ಪನವರ ಮಾತನಾಡಿ, ಪುರಾಣ, ಪ್ರವಚನ ಮತ್ತು ಆಧ್ಯಾತ್ಮಿಕ ಚಿಂತನೆಯ ಕಾರ್ಯಕ್ರಮಗಳನ್ನು ಸಂಘಟನೆ ಮಾಡುವುದು ಕಠಿಣವಾಗಿದೆ. ಇಂಥ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲು ಆರ್ಥಿಕ ಸಹಾಯ ಮುಖ್ಯವಾಗಿದೆ ಎಂದರು.

ರಾಮಣ್ಣ ಭದ್ರನ್ನವರ, ರಮೇಶ ಕೊಣ್ಣೂರ ಮಾತನಾಡಿದರು.

ಮಹಾದೇವ ಸರಸ್ವತಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಂಕರ ಜಾಲಿಗಿಡದ, ಎಸ್. ಎಸ್. ಹೂಲಿ, ಸಿದ್ರಾಮ ಸವದತ್ತಿ, ವಿರುಪಾಕ್ಷಪ್ಪ ಕೊಕಟನೂರ, ಅಗ್ರಾಣೆಪ್ಪ ಬುದ್ನಿ, ಕಲ್ಲಪ್ಪ ಪತ್ತಾರ, ಮಹಾದೇವ ಬಾಣಕಾರ, ವೈ. ಬಿ. ಕೊರಡೂರ, ಬಸಪ್ಪ ಕೊಣ್ಣೂರ, ಶೈಲಜಾ ನುಚ್ಚಿ, ಮಹಾನಂದ ಕುಳ್ಳಿ, ಮಹಾದೇವಿ ಕೊಳಕಿ, ರಜನಿ ಶೇತೆ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## ಸರಕಾರಿ ಶಾಲೆಗಳ ಅಭಿವೃದ್ದಿಗೆ
# ಸಾರ್ವಜನಿಕರ ಸಹಕಾರ ಅವಶ್ಯ: ಹಳಮನಿ

**ಮಹಾಲಿಂಗಪುರ :** ಸರಕಾರಿ ಶಾಲೆಗಳ ಅಭಿವೃದ್ದಿಗೆ ಸಾರ್ವಜನಿಕರ ಸಹಕಾರ ಅವಶ್ಯವಾಗಿದೆ. ಗ್ರಾಮೀಣ ಭಾಗಗಳಲ್ಲಿ ಸ್ಪಂದನೆ ದೊರೆಯುತ್ತಿರುವುದು ಸಂತಸದ ಸಂಗತಿ ಎಂದು ಶಿಕ್ಷಣ ಸಂಯೋಜಕ ಬಿ.ಎಂ ಹಳಮನಿ ಹೇಳಿದರು.

ಸಮೀಪದ ಚಿಮ್ಮಡ ಗ್ರಾಮದ ಸರಕಾರಿ ಹೆಣ್ಣು ಮಕ್ಕಳ ಹಿರಿಯ ಮಾದರಿ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಎಸ್ಡಿಎಂಸಿ ಸದಸ್ಯರಿಂದ ನೀಡಲಾದ ವಿಶೇಷ ಸಮವಸ್ತ್ರ ವಿತರಣಾ ಕಾರ್ಯಕ್ರಮದಲ್ಲಿ ಅಥಿತಿಗಳಾಗಿ ಮಾತನಾಡಿದ ಅವರು ಸರಕಾರ ಹಲವಾರು ಸೌಲಭ್ಯಗಳನ್ನು ನೀಡುತಿದ್ದರೂ ವಿಶೇಷ ಸೌಲಭ್ಯಗಳನ್ನು ಸರಕಾರಿ ಶಾಲೆಗಳಿಗೆ ನೀಡುವ ಮೂಲಕ ಖಾಸಗಿ ಶಾಲೆಗಳೊಂದಿಗೆ ಪೈಪೋಟಿ ನೀಡುತ್ತಿವೆ.

ಇದಕ್ಕೆ ಸಹಾಯ ಸಹಕಾರ ನೀಡುತ್ತಿರುವ ಶಾಲಾ ಸುಧಾರಣಾ ಸಮೀತಿ ಹಾಗೂ ಗ್ರಾಮದ ಶಿಕ್ಷಣ ಪ್ರೇಮಿಗಳಕಾರ್ಯ ಶ್ಲಾಘನೀಯ ಎಂದರು.



ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗೆವಿಶೇಷಸಮವಸ್ತ್ರವಿತರಿಸುವ ಮೂಲಕ ಉದ್ಘಾಟಿಸಲಾಯಿತು.

ಸಿಆರ್‌ಪಿ ಶ್ರೀಮತಿ ದ್ರಾಕ್ಷಾಯಿಣಿ ಮಂಡಿ, ಗ್ರಾ.ಪಂ. ಸದಸ್ಯ ಮಹಾಲಿಂಗ ಮಾಯಣ್ಣವರ, ಶಿವಾನಂದ ಬೆಳಗಲಿ, ಪ್ರಭಾರಿ ಮುಖ್ಯಗುರು ಎಸ್.ಎ. ಬಿರಾದರ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ಡಿಎಂಸಿ ಅಧ್ಯಕ್ಷ ಮೋನೇಶ ಬಡಿಗೇರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎಸ್‌ಡಿಎಸ್‌ಸಿ ಉಪಾಧ್ಯಕ್ಷೆ ಶ್ರೀಮತಿ ಅಣ್ಣಪೂರ್ಣ ಅಥಣಿ,

ಇಮಾಮು ಯಾದವಾಡ, ಪರಪ್ಪಾ ದೇವಗೋಳ ಇದ್ದರು. ಶಿಕ್ಷಕ ಬಿ.ಡಿ.ನೇಮಗೌಡ ಸ್ವಾಗತಿಸಿ ನಿರೂಪಿಸಿದರು.

## ಪಿಕೆಪಿಎಸ್ ನೂತನ ಕಟ್ಟಡ ಉದ್ಘಾಟನೆ
# ರೈತರಿಗೆ ಬಡ್ಡಿ ರಹಿತ ಸಾಲದ ಜೊತೆಗೆ ಬಿನ್ ಶೇತ್ಕಿ ಸಾಲವನ್ನು ನೀಡಿ: ಎಸ್.ಆರ್.ಪಾಟೀಲ್

**ಮಹಾಲಿಂಗಪುರ :** ಪಿಕೆಪಿಎಸ್ ಲಾಭದಲ್ಲಿ ಮುಂದೆವರೆಯಬೇಕಾದರೆ ರೈತರಿಗೆ ಬಡ್ಡಿ ರಹಿತ ಸಾಲದ ಜೊತೆ ಹೆಚ್ಚಿನ ಪ್ರಮಾಣದಲ್ಲಿ ಬಿನ್ ಶೇತ್ಕಿ ಸಾಲವನ್ನೂ ನೀಡಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ಆರ್.ಪಾಟೀಲ್ ಹೇಳಿದರು.

ಸಮೀಪದ ನಂದಗಾಂವ ಗ್ರಾಮದಲ್ಲಿ ಪಿಕೆಪಿಎಸ್ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ರೈತರ ಆರ್ಥಿಕ ಅಭಿವೃದ್ಧಿಗೆ ಪ್ರಾಥಮಿಕ ಹಂತದಲ್ಲಿಯೇ ಪಿಕೆಪಿಎಸ್ ಶ್ರಮ ವಹಿಸಿ ಕೆಲಸ ಮಾಡುವ ಅಗತ್ಯವಿದೆ. ಪಾರದರ್ಶಕ ವ್ಯವಹಾರದಿಂದ ಸಂಸ್ಥೆ ಲಾಭ ಗಳಿಸಲು ಸಾಧ್ಯವಾಗುತ್ತದೆ. ಅಲ್ಲದೆ ಶೇರುದಾರರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಗಳ ಜೊತೆಗಿನ ಸಂಬಂಧ ಸಹ ಪಾರದರ್ಶಕವಾಗಿರಬೇಕು.



ರನ್ನ ಶುಗರ್ಸ್ ಮಾಜಿ ಅಧ್ಯಕ್ಷರಾದ ರಾಮಣ್ಣ ತಳೇವಾಡ ಮಾತನಾಡಿ, ಪಿಕೆಪಿಎಸ್ ರೈತರಿಗೆ ನೀಡಿದ ಸಾಲ ಕಟಬಾಕಿಯಾಗದಂತೆ ಅನುಸರಿಸಬೇಕಾದ ಕ್ರಮಗಳನ್ನು ಮತ್ತು ಬಿನ್ ಶೇತ್ಕಿ ಸಾಲ ನೀಡುವ ಕುರಿತು ವಿವರಿಸಿದರು.

ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ಶಿದ್ದು ಕೊಣ್ಣೂರ ಮಾತನಾಡಿ, ನಂದಗಾಂವ ಘಟಪ್ರಭೆ ತೀರದ ಸಮೃದ್ಧ ಗ್ರಾಮವಾಗಿ ಆರ್ಥಿಕ ಸಬಲತೆ ಎಡೆಗೆ ಸಾಗುತ್ತಿದೆ. ಸ್ಥಳೀಯ ಮತ್ತು ಆಸುಪಾಸಿನಲ್ಲಿರುವ ರೈತ ಬಂಧುಗಳ ಬಹು ದಿನಗಳ ನೂತನ ಕಟ್ಟಡದ ಕನಸ್ಸಾಗಿತ್ತು. ಈಗ ರಾಜಕೀಯ ಹಿರಿಯರಾದ ಎಸ್ ಆರ್. ಪಾಟೀಲ್ ಅವರ ಸಹಕಾರದಿಂದ ಪಿಕೆಪಿಎಸ್ ನೂತನ ಕಟ್ಟಡ ಸಾಕಾರಗೊಂಡಿದೆ. ಕಾಲ ಕಾಲಕ್ಕೆ ಉತ್ತಮ ನಿರ್ವಹಣೆಯೊಂದಿಗೆ ಕಟ್ಟಡ ಬಗ್ಗೆ ಕಾಳಜಿ ವಹಿಸಬೇಕು ಎಂದರು.

ಪಿಕೆಪಿಎಸ್ ಅಧ್ಯಕ್ಷ ಬಿ.ಜಿ.ಹೊಸೂರ, ಉಪಾಧ್ಯಕ್ಷ ಕೆ.ಕೆ.ಬಿ।ಪಾಟೀಲ್, ಡಾ.ಅಜೀತ ಕನಕರಡ್ಡಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ರಂಗಪ್ಪ ಹೊಸೂರ, ರಾಜು ಬಾರುಕೋಲ, ಸದಾಶಿವ ಗೊಬ್ಬರದ, ಸುರೇಶ್ ಹೊಸೂರ, ಶಿವನಗೌಡ ಪಾಟೀಲ, ಹಣಮಂತಗೌಡ ಪಾಟೀಲ, ವೆಂಕಣ್ಣ ಗೊಬ್ಬರದ, ಸಂಗಪ್ಪ ಮುಗಳಖೋಡ, ಮಾರುತಿ ಇಟ್ನಾಳ, ಮಾಬೂಶಿ ಕೌಜಲಗಿ, ರಂಗಪ್ಪ ಹೊಸೂರ, ಶೇಕಪ್ಪಗೌಡ ಪಾಟೀಲ್, ಮುಖ್ಯ ನಿರ್ವಾಹಕ ಮಲ್ಲಯ್ಯ ಮಠಪತಿ ಇದ್ದರು. ನಿವೃತ್ತ ಶಿಕ್ಷಕ ಬಸವರಾಜ ಪೂಜೇರಿ ನಿರೂಪಿಸಿ-ವಂದಿಸಿದರು.

# 78ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ

**ಮುಧೋಳ :** ಸಚಿವರಾದ ಆರ್ ಬಿ ತಿಮ್ಮಾಪುರವರ ಗೃಹ ಕಚೇರಿಯಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಶೋಕ್ ಕಿವಡಿ ಅವರ ನೇತೃತ್ವದಲ್ಲಿ ಆಚರಿಸಲಾಯಿತು. ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿದ. ಅಧ್ಯಕ್ಷರು ಸ್ವತಂತ್ರ್ಯಕ್ಕಾಗಿ ಹುಟ್ಟಿರುವ ಕಾಂಗ್ರೆಸ್ ಪಕ್ಷ ಕಾಂಗ್ರೆಸ್ ನಿಂದ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು ದೇಶಕ್ಕೆ ಸ್ವಾತಂತ್ರ್ಯ ಸಿಗಲು ಕಾಂಗ್ರೆಸ್ಸಿನ ಕೊಡುಗೆ ಅಪಾರವಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ಸಿನ ಅನೇಕ ಗಣ್ಯರು ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ ಸ್ವಾತಂತ್ರ್ಯಕ್ಕಾಗಿ ಹಗಲು ಇರುಳು ಅನ್ನದೆ ಕಾಡು ಗುಡ್ಡ ಕಾಡುಗಳಲ್ಲಿ ತಮ್ಮ ಜೀವನ ಕಳೆದು ಬ್ರಿಟಿಷರಿಂದ ಅಗಸ್ಟ 15 .1947 ರಂದು ದೇಶಕ್ಕೆ ಸ್ವಾತಂತ್ರ್ಯ ಸಿಗುವ ಹಾಗೆ ಹೋರಾಡಿದ ಕಾಂಗ್ರೆಸ್ನವರು ಎಂದು ಹೇಳಿದರು.


ಈ ಸಂದರ್ಭದಲ್ಲಿ ಮುಧೋಳ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಹೆಚ್ ಎ ಕಡಪಟ್ಟಿ ನಗರ ಘಟಕ ಅಧ್ಯಕ್ಷರಾದ ರಾಘವೇಂದ್ರ ಮೂ ಮೋಕಾಶಿ ಹಿರಿಯರಾದ ಘಾಟಿಗೆ ಮತ್ತು ಕಾಂಗ್ರೆಸ್ ನಾಯಕರಾದ ಹನುಮಂತ ತಿಮ್ಮಾಪುರ. ಶ್ರೀಮತಿ ರಾಜ್ಮಾ ಬೇಪಾರಿ. ಕುಮಾರ್ ಮಿರ್ಜಿ. ಸೈದು ಜಂಬಗಿ. ಪ್ರಶಾಂತ್ ಗೋರ್ಪಡೆ. ಟಿಪ್ಪು ಅಂಬಿ. ಸತೀಶ್ ಹೊಸಮನಿ. ಬಸು ಬಳಗಾರ.



ಲಕ್ಕಪ್ಪ ಬಂಡಿವಡ್ಡರ. ಕಚೇರಿಯ ಸಿಬ್ಬಂದಿಗಳಾದ ವೀರೇಶ್ ಕಲಾದಗಿ. ಕೃಷ್ಣ ಇರಗಾರ. ಪಾಂಡು ಹರಿಜನ ಇನ್ನು ಮುಂತಾದವರು ಉಪಸ್ಥಿತರಿದ್ದರು.

## ಪ್ರತಿ ರವಿವಾರ ಸ್ವಚ್ಛತಾ ಅಭಿಯಾನ
# ಪಟ್ಟಣದ ಸ್ವಚ್ಛತೆಗೆ ಸಾರ್ವಜನಿಕರ ಸಹಕಾರ ಅಗತ್ಯ: ಮಹಾಲಿಂಗ ದೇಸಾಯಿ





**ಮಹಾಲಿಂಗಪುರ :** ಪಟ್ಟಣದ ಹಿಂದೂ ರೂದ್ರಭೂಮಿ, ಕುಡಿಯುವ ನೀರಿನ ಮೂಲಾದಾರವಾದ ಕೆರೆ ಹಾಗೂ ದೇವಸ್ಥಾನಗಳ ಸ್ವಚ್ಛತೆಗೆ ಪುರಸಭೆಯ ಜೊತೆಗೆ ಪಟ್ಟಣದ ಯುವಕರು ಮತ್ತು ಸಾರ್ವಜನಿಕರ ಸಹಕಾರವು ಅಗತ್ಯವಿದೆ ಎಂದು ಹಿಂದೂ ಸಂಘಟನೆಯ ಯುವ ಮುಖಂಡ ಮಹಾಲಿಂಗ ದೇಸಾಯಿ ಹೇಳಿದರು.

ರವಿವಾರ ಹಿಂದೂ ಸಂಘಟನೆಗಳ ವತಿಯಿಂದ ಹಮ್ಮಿಕೊಂಡಿದ್ದ ಪಟ್ಟಣದ ಚನ್ನಗೀರಿ ಪರ್ವತದ ರಾಮಲಿಂಗೇಶ್ವರ(ಚನ್ನಗೀರೇಶ್ವರ) ದೇವಸ್ಥಾನದ ಆವರಣ ಹಾಗೂ ಪುರಾತನ ಕಲ್ಯಾಣಿ ಸ್ವಚ್ಛತಾ ಶ್ರಮದಾನದಲ್ಲಿ ಭಾಗವಹಿಸಿ ಮಾತನಾಡಿದ ಅವರು ಕಳೆದ 10 ವಾರಗಳಿಂದ ನಮ್ಮ ಸಂಘಟನೆಗಳಿಂದ ನಿರಂತರವಾಗಿ ಪ್ರತಿ ರವಿವಾರ ಹಿಂದೂ ರುದ್ರಭೂಮಿ ಹಾಗೂ ಕೆರೆಯ ಆವರಣ, ದೇವಸ್ಥಾನಗಳಲ್ಲಿ ಸ್ವಚ್ಛತೆ ಶ್ರಮದಾನ ಮಾಡುತ್ತಿದ್ದೇವೆ ಎಂದರು.

ಆರ್‌ಎಸ್‌ಎಸ್‌ನ ಸ್ವಯಂ ಸೇವಕ ರಾಘವೇಂದ್ರ ಶಿರೋಳ ಮಾತನಾಡಿ ನಮ್ಮ ಹಿಂದೂಪರ ಸಂಘಟನೆಗಳ ಸಮಾನ ಮನಸ್ಕ ಯುವಕರು ಪ್ರತಿ ರವಿವಾರದಂತೆ ಒಂದು ವರ್ಷದವರೆಗೆ ನಿರಂತರವಾಗಿ ಪಟ್ಟಣದಲ್ಲಿರುವ ಹಿಂದೂ ರುದ್ರಭೂಮಿ, ವಿವಿಧ ದೇವಸ್ಥಾನಗಳ ಆವರಣವನ್ನು ಸ್ವಚ್ಛತೆ ಮಾಡುವ ಸಂಕಲ್ಪ ಮಾಡಿದ್ದೇವೆ. ಪಕ್ಷಾತೀತ ಮತ್ತು ಜಾತ್ಯಾತೀತವಾಗಿ ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ನಮ್ಮ ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಬಹುದಾಗಿದೆ ಎಂದರು.

ಮುಂಜಾನೆ 6 ರಿಂದ 9 ಗಂಟೆಯವರೆಗೆ ಹಿಂದೂ ಸಂಘಟನೆಗಳ ಯುವಕರು ಸ್ವಚ್ಛತಾ ಕಾರ್ಯದಲ್ಲಿ ಭಾಗಿಯಾಗಿ ಶ್ರಮದಾನ ಮಾಡಿದರು. ಪುರಸಭೆ ಸದಸ್ಯ ರವಿ ಜವಳಗಿ, ಪತ್ರಕರ್ತ ಚಂದ್ರಶೇಖರ ಮೋರೆ ಶ್ರಮದಾನದಲ್ಲಿ ಭಾಗವಹಿಸಿದ್ದರು.

ಶ್ರೀನಿಧಿ ಕುಲಕರ್ಣಿ, ಬಸವರಾಜ ಮುರಾರಿ, ಅಭಿ ಲಮಾಣಿ, ಹಣಮಂತ ನಾವ್ಹಿ, ರಾಘು ಪವಾರ, ದಾನೇಶ ಡೊಂಬರ, ಮಂಜುನಾಥ ಭಾವಿಕಟ್ಟಿ, ಅರ್ಜುನ ಪವಾರ, ಶಶಿ ಬದ್ನಿಕಾಯಿ, ಅನೀಲ ಖವಾಸಿ,

ಆನಂದ ಮಡ್ಡೆನ್ನವರ, ರಾಜು ನಾವ್ಹಿ, ಶಿವರಾಜ ಸಣ್ಣಕ್ಕಿ, ಸಿ.ಬಿ.ಭಜಂತ್ರಿ, ಮಹಾದೇವ ಗೌಂಡಿ, ವಿಶಾಲ ಪತ್ತಾರ, ಚೇತನ ಬಂಡಿವಡ್ಡರ ಸೇರಿದಂತೆ ಹಲವರು ಸ್ವಚ್ಛತೆಯ ಸೇವಾ ಕಾರ್ಯದಲ್ಲಿ ಭಾಗವಹಿಸಿದ್ದರು.

## ಸ್ವಾತಂತ್ರ್ಯ ದಿನಾಚರಣೆಯಲ್ಲಿ
# ನಿವೃತ್ತ ಶಿಕ್ಷಕ ನದಾಫ್‌ಗೆ ಸನ್ಮಾನ



**ಕೊಪ್ಪಳ :** ನಗರದ ಶ್ರೀ ಸಿದ್ದರಾಮೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಕೊಪ್ಪಳದ ಕಚೇರಿ ಸಭಾಂಗಣದಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ರಾಷ್ಟ್ರ ಧ್ವಜಾರೋಹಣ ನೆರವೇರಿತು ಸದರಿ ಸಮಾರಂಭದಲ್ಲಿ ಇತ್ತೀಚಿಗೆ ನಿವೃತ್ತಗೊಂಡ ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗದ ವೃತ್ತಿ ಅಮೀರ್ ಹಂಜ ನದಾಫ್ ರವರಿಗೆ ಸಂಘದ ಪರವಾಗಿ ಸನ್ಮಾನಿಸಲಾಯಿತು, ಅಮೀರ್ ಹಂಜ ನದಾಫ್ ರವರು ಸುಮಾರು ಮೂರು ದಶಕಗಳ ಕಾಲ ವೃತ್ತಿ ಶಿಕ್ಷಕರಾಗಿ ಉತ್ತಮ ಸೇವೆ ಸಲ್ಲಿಸಿ, ಇತ್ತೀಚೆಗೆ ನಿವೃತ್ತಿಗೊಂಡ ಹಿನ್ನೆಲೆಯಲ್ಲಿ ಅವರ ಸೇವ ಕಾರ್ಯವನ್ನು ಪರಿಗಣಿಸಿ ಅವರಿಗೆ ಸನ್ಮಾನಿಸಿ ಅಭಿನಂದಿಸಲಾಯಿತು,

ಸಮಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀಮತಿ ಹೇಮಾವತಿ ಬಳ್ಳಾರಿ ಪಾಲ್ಗೊಂಡು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಇದೇ ವೇಳೆ ಸಮಾಜ ಸೇವಕರಾದ ಸೈಯದ್ ಫೌಂಡೇಶನ್ ಅಧ್ಯಕ್ಷ ಕೆಎಂ ಸೈಯದ್ ಇರುವ ಹಿರಿಯ ಸಮಾಜ ಸೇವಕರಾದ ಶಬುದ್ದಿನ್ ಸಾಬ್ ನೂರ್ ಬಾಷಾ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಜ್ಯೋತಿ ಮಂಜುನಾಥ್ ಗೊಂಡಬಾಳ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಸಂಘದ ಪರವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State